ಸಾರ್ವಜನಿಕ ಶಿಕ್ಷಣ ಇಲಾಖೆ

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ - ಎಲ್ಲರೂ ಬೆಳೆಯೋಣ

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

ಸಂಶೋಧನೆ, ಮೌಲ್ಯಮಾಪನ, ಉಸ್ತುವಾರಿ ಮತ್ತು ಮೇಲ್ವಿಚಾರಣೆ
ಮಧ್ಯವರ್ತನದಡಿಯಲ್ಲಿ (REMS)

# ಶಿವಮೊಗ್ಗ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ ಅನುಷ್ಠಾನ ಕುರಿತು ಒಂದು ಮಾನೋಗ್ರಾಫ್ 2010-11



ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ,
ಬಿ.ಹೆಚ್.ರಸ್ತೆ, ಶಿವಮೊಗ್ಗ-577 201

ಅಧ್ಯಯನಕಾರರು :
ಶ್ರೀ ಡಿ. ಭೀಮನಗೌಡ,
ಉಪನ್ಯಾಸಕರು, ಡಯಟ್, ಶಿವಮೊಗ್ಗ

ಸಾರ್ವಜನಿಕ ಶಿಕ್ಷಣ ಇಲಾಖೆ

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ-ಎಲ್ಲರೂ ಬೆಳೆಯೋಣ

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

ಸಂಶೋಧನೆ, ಮೌಲ್ಯಮಾಪನ, ಉಸ್ತುವಾರಿ ಮತ್ತು ಮೇಲ್ವಿಚಾರಣೆ
ಮಧ್ಯವರ್ತನದಡಿಯಲ್ಲಿ (REMS)

# ಶಿವಮೊಗ್ಗ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ ಅನುಷ್ಠಾನ ಕುರಿತು ಒಂದು ಮಾನೋಗ್ರಾಫ್ 2010-11

ಅಧ್ಯಯನಕಾರರು :
**ಶ್ರೀ ಡಿ. ಭೀಮನಗೌಡ**
ಉಪನ್ಯಾಸಕರು, ಡಯಟ್, ಶಿವಮೊಗ್ಗ



# ಮುನ್ನುಡಿ

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಹಾಗೂ ಗುಣಮಟ್ಟ ಸುಧಾರಣೆಗಾಗಿ ಸರ್ಕಾರವು ಸರ್ವಶಿಕ್ಷಾ ಅಭಿಯಾನದಡಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಅದರಲ್ಲಿ ವಿಶೇಷವಾಗಿ ಮಕ್ಕಳ ಸಾರ್ವತ್ರಿಕ ದಾಖಲಾತಿ, ಹಾಜರಾತಿ ಮತ್ತು ಪ್ರಭುತ್ವಮಟ್ಟದ ಕಲಿಕೆಗೆ ಒತ್ತು ನೀಡಲು ಆರ್.ಇ.ಎಂ.ಎಸ್. ಮೂಲಕ ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಹಮ್ಮಿಕೊಂಡ ಚಟುವಟಿಕೆಗಳು, ಅನುಷ್ಠಾನಗೊಳ್ಳುತ್ತಿರುವುದು ಶ್ಲಾಘನೀಯ.

REMS ಹೆಸರೇ ಸೂಚಿಸಿರುವಂತೆ ಸಂಶೋಧನೆ ಮೌಲ್ಯಮಾಪನ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಶಿಕ್ಷಣಕ್ಷೇತ್ರದಲ್ಲಿ ಹೊಸ ಆಲೋಚನೆಗಳು, ಚಿಂತನೆಗಳು ವಿನೂತನ ಪರಿಕಲ್ಪನೆಗಳಾಗಿದ್ದು ಶಿಕ್ಷಕರು ತಮ್ಮ ವೃತ್ತಿಯಲ್ಲಿ ಹೊಸತನ ಕಂಡುಕೊಂಡು ಶಿಕ್ಷಣ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆಗೆ ಪಾತ್ರರಾಗುವುದು ಸಮಂಜಸವಾಗಿದೆ.

ಈ ದಿಸೆಯಲ್ಲಿ ನಮ್ಮ ಸಂಸ್ಥೆಯ ಉಪನ್ಯಾಸಕರು ಅನ್ನದಾನ ಮಹಾದಾನ, ವಿದ್ಯಾದಾನ ಶ್ರೇಷ್ಠದಾನ, ಎಂಬಂತೆ ಅಕ್ಷರದಾಸೋಹ ಕಾರ್ಯಕ್ರಮವು ಜಿಲ್ಲೆಯಲ್ಲಿ ನಿರ್ವಹಣೆಯ ಸ್ಥೂಲ ಪರಿಚಯವನ್ನು ಮಾನೋಗ್ರಾಪ್ ಮೂಲಕ ಜಿಲ್ಲೆ, ಬ್ಲಾಕ್, ಶಾಲೆಗಳಿಗೆ ಭೇಟಿನೀಡಿ ಅನುಷ್ಠಾನದ ಮಾಹಿತಿಯನ್ನು ಕಲೆ ಹಾಕಿರುವುದು ಪ್ರಸ್ತುತವಾಗಿದೆ.

ಗುಣಾತ್ಮಕ ಶಿಕ್ಷಣವನ್ನು ಒದಗಿಸುವುದರೊಂದಿಗೆ ಅಕ್ಷರ ದಾಸೋಹವು ಯಶಸ್ವಿಯಾಗಿ ನಡೆಯುವಂತೆ ನೋಡಿಕೊಳ್ಳವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ದಿನಾಂಕ:31 -03-2011
ಸ್ಥಳ : ಡಯಟ್, ಶಿವಮೊಗ್ಗ

(ಶ್ರೀಮತಿ ಜಿ.ಪಿ ಚಂದ್ರಮ್ಮ)
ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು
(ಅಭಿವೃದ್ಧಿ) ಡಯಟ್, ಶಿವಮೊಗ್ಗ.

# ಕೃತಜ್ಞತೆ



ಸಂಶೋಧನೆ, ಮೌಲ್ಯಮಾಪನ, ಉಸ್ತುವಾರಿ ಮತ್ತು ಮೇಲ್ವಿಚಾರಣೆ (REMS) ಅಡಿಯಲ್ಲಿ ಜಿಲ್ಲೆಯ ಅಕ್ಷರದಾಸೋಹ ಅನುಷ್ಠಾನ ಕುರಿತು ಮಾನೋಗ್ರಾಫ್ ಒಂದು ಅಧ್ಯಯನ ಕೈಗೊಳ್ಳುವಲ್ಲಿ ಸೂಕ್ತ ಮಾರ್ಗದರ್ಶನ ಮತ್ತು ಪ್ರೇರೇಪಣೆ ನೀಡಿದ ಶ್ರೀಮತಿ ಜಿ.ಪಿ ಚಂದ್ರಮ್ಮ, ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ಡಯಟ್, ಶಿವಮೊಗ್ಗ ಇವರಿಗೆ ಹೃದಯಪೂರ್ವಕ ಕೃತಜ್ಞತೆಗಳು.

ಅಧ್ಯಯನಕ್ಕೆ ಮಾಹಿತಿ ಸಂಗ್ರಹಿಸುವಲ್ಲಿ ಸಲಹೆ, ಸಹಕಾರ ಮತ್ತು ಮಾಹಿತಿ ನೀಡುವಲ್ಲಿ ಸಹಕರಿಸಿದ ಜಿಲ್ಲಾ ಅಕ್ಷರದಾಸೋಹ ಶಿಕ್ಷಣಾಧಿಕಾರಿಗಳಿಗೆ, ಜಿಲ್ಲೆಯ ಎಲ್ಲಾ ಬ್ಲಾಕಿನ ಅಕ್ಷರದಾಸೋಹ, ಸಹಾಯಕ ನಿರ್ದೇಶಕರಿಗೆ ಹಾಗೂ ಆಯಾ ಬ್ಲಾಕಿನ ಆಯ್ದ ಶಾಲೆಗಳಿಂದ ಮಾಹಿತಿ ಸಂಗ್ರಹಿಸುವಲ್ಲಿ ಸಹಕರಿಸಿದ ಶಾಲಾ ಮುಖ್ಯಶಿಕ್ಷಕರು, ಶಿಕ್ಷಕರು, ಎಸ್.ಡಿ.ಎಂ.ಸಿ ಯವರಿಗೆ ಆತ್ಮೀಯ ಅಭಿನಂದನೆಗಳು.

ಅಕ್ಷರದಾಸೋಹ ಕಾರ್ಯಕ್ರಮದ ಕೇಂದ್ರ ಬಿಂದುಗಳಾದ ಅಡುಗೆ ಸಿಬ್ಬಂದಿ ಮತ್ತು ಮಕ್ಕಳು, ಪೋಷಕರು, ಸೂಕ್ತ ಮಾಹಿತಿಯನ್ನು ಅನುಭವದ ಹಿನ್ನೆಲೆಯಲ್ಲಿ ನೀಡಿ ಅಧ್ಯಯನಕ್ಕೆ ಮಾಹಿತಿಗಳ ಪುಷ್ಟಿಯನ್ನು ನೀಡಿರುತ್ತಾರೆ. ಇವರಿಗೆ ಆತ್ಮೀಯ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಯನಕ್ಕೆ ಸ್ನೇಹಪೂರ್ವಕವಾಗಿ ಸಹಕರಿಸಿದ ಮಿತ್ರರಾದ ಶ್ರೀ ಕೆ. ಸಿ. ಸುರೇಶ್, ಉಪನ್ಯಾಸಕರು ಹಾಗೂ REMS ಸಮಾಲೋಚಕರು, ಶ್ರೀ.ಎ.ಕೆ. ನಾಗೇಂದ್ರಪ್ಪ, ಉಪನ್ಯಾಸಕರು, ಶ್ರೀ ಪಿ. ನಾಗರಾಜ್, ಉಪನ್ಯಾಸಕರು, ಶ್ರೀ ಹೆಚ್. ರಾಮಲಿಂಗಪ್ಪ, ಉಪನ್ಯಾಸಕರು, ಡಯಟ್, ಶಿವಮೊಗ್ಗ ಇವರಿಗೆ ಹಾಗೂ ವರದಿಯನ್ನು ಪುಸ್ತಕ ರೂಪದಲ್ಲಿ ಸುಂದರವಾಗಿ ಹೊರತರಲು ಸಹಕರಿಸಿದ ಸೀತಾ ಪ್ರಿಂಟಿಂಗ್ ಪ್ರೆಸ್ ಮಾಲೀಕರಾದ ಶ್ರೀ ಮಂಜುನಾಥ್‌ರವರಿಗೆ ಸ್ನೇಹಪೂರ್ವಕ ಕೃತಜ್ಞತೆಗಳು.

ದಿನಾಂಕ:31-03-2011

ಸ್ಥಳ : ಡಯಟ್,ಶಿವಮೊಗ್ಗ.

**ಡಿ. ಭೀಮನಗೌಡ,**

**ಉಪನ್ಯಾಸಕರು, ಡಯಟ್, ಶಿವಮೊಗ್ಗ.**

ಅಧ್ಯಾಯ-1

# ಅಕ್ಷರ ದಾಸೋಹ ಕಾರ್ಯಕ್ರಮ ಹಿನ್ನೆಲೆ, ಪರಿಕಲ್ಪನೆ, ಉದ್ದೇಶಗಳು

**ಹಿನ್ನೆಲೆ :-**

"ಅನ್ನದಾನಂ ಪರಂದಾನಂ ವಿದ್ಯಾದಾನಂ ಮತಃಪರಂ ಅನ್ನೇನ ಕ್ಷಣಿಕ ತೃಪ್ತೀಹಿ ಯಾವ ಜೀವಂತೂ ಮಹಾವಿದ್ಯಯ" ಎಂಬ ಸೂಕ್ತಿಯನ್ನು ಗಮನಿಸಿದರೆ ವಿದ್ಯಾದಾನ ಮತ್ತು ಅನ್ನದಾನದ ಪ್ರಾಮುಖ್ಯತೆ ವ್ಯಕ್ತಿಯ ಜೀವನದಲ್ಲಿ ಎಷ್ಟರ ಮಟ್ಟಿಗೆ ಮಹತ್ವದ್ದಾಗಿದೆ ಎಂಬುದು ಗೋಚರವಾಗುತ್ತದೆ. ಈ ದಿಸೆಯಲ್ಲಿ ಮಕ್ಕಳ ಶಿಕ್ಷಣಕ್ಕೆ ಪೂರಕವಾಗಿ ಅಕ್ಷರ ದಾಸೋಹ ಕಾರ್ಯಕ್ರಮವು ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲೂ ಅನುಷ್ಠಾನಗೊಂಡಿರುವ ಯಶಸ್ವಿ ಸದುಪಯುಕ್ತ ಕಾರ್ಯಕ್ರಮ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ನಡೆಯುತ್ತಿರುವ ಈ ಕಾರ್ಯಕ್ರಮದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಶುಚಿ ರುಚಿಯಾದ ಪೌಷ್ಠಿಕಾಂಶಭರಿತ ಮಧ್ಯಾಹ್ನದ ಬಿಸಿಯೂಟ ನೀಡುತ್ತಿರುವುದು ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲೊಂದಾಗಿದೆ. ಇಡೀ ದೇಶದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವುದು ಹೆಮ್ಮೆಯ ವಿಷಯ. ಹಸಿದ ಒಡಲಿಗೆ ತಂಪೆರೆವ ಇಂತಹ ಉತ್ತಮವಾದ ಆಹಾರದಿಂದ ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಸಿ ಶೈಕ್ಷಣಿಕ ಪ್ರಗತಿಗೂ ಪೂರಕವಾಗಿದೆ.

**ಪರಿಕಲ್ಪನೆ :-**

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಕೇಂದ್ರ ಸರ್ಕಾರವು ಸರ್ವ ಶಿಕ್ಷಾ ಅಭಿಯಾನ ಜಾರಿಯ ನಂತರ ಪ್ರಾಥಮಿಕ ಶಾಲಾ ಮಕ್ಕಳಿಗೆ ಮದ್ಯಾಹ್ನದ ವೇಳೆಯಲ್ಲಿ ಶುಚಿ-ರುಚಿಯಾದ ಪೌಷ್ಠಿಕಾಂಶಯುಕ್ತ ಬಿಸಿ ಊಟವನ್ನು ನೀಡುವ ಯೋಜನೆ ಅಥವಾ ಕಾರ್ಯಕ್ರಮವೇ 'ಅಕ್ಷರ ದಾಸೋಹ'.

ಈ ಕಾರ್ಯಕ್ರಮವು ಪ್ರಾರಂಭದಲ್ಲಿ ಅಂದರೆ 2002-2008 ರಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಜಾರಿಗೊಂಡು ನಂತರ ಖಾಸಗಿ ಅನುದಾನಿತ ಶಾಲೆಗಳಿಗೂ ವಿಸ್ತರಿಸಲ್ಪಟ್ಟಿತು.

**ಅಕ್ಷರ ದಾಸೋಹ ಕಾರ್ಯಕ್ರಮದ ಉದ್ದೇಶಗಳು:-**

- ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯನ್ನು ಉತ್ತಮಪಡಿಸುವುದು.
- ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ತೊರೆಯುವುದನ್ನು ತಪ್ಪಿಸುವುದು.
- ಪೌಷ್ಠಿಕತೆಯನ್ನು ಹೆಚ್ಚಿಸುವುದರ ಮೂಲಕ ಮಕ್ಕಳ ಆರೋಗ್ಯ ವೃದ್ಧಿಸುವುದು.
- ಮಕ್ಕಳಲ್ಲಿ ಕಲಿಕೆಯ ಮಟ್ಟವನ್ನು ಉತ್ತಮಪಡಿಸುವುದು.

ಸದರಿ ಯೋಜನೆಯ ಯಶಸ್ವಿ ಅನುಷ್ಠಾನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಶಾಲಾಭಿವೃದ್ಧಿ ಸಮಿತಿಗಳು, ಶಾಲಾ ಮುಖ್ಯಶಿಕ್ಷಕರು, ಸಹಶಿಕ್ಷಕರು, ಪೋಷಕರು ಇವರೆಲ್ಲರ ಜವಾಬ್ಧಾರಿ ಗುರುತರವಾಗಿರುತ್ತದೆ. ಮೇಲಾಗಿ ಅಡುಗೆ ಸಿಬ್ಬಂದಿಯವರಿಗೆ ಪ್ರತೀ ವರ್ಷ ತರಬೇತಿಯನ್ನು ನೀಡುವ ಮೂಲಕ ಸ್ವಚ್ಛತೆ, ಸುರಕ್ಷತೆ, ಮಿತವ್ಯಯ ಸೂತ್ರಗಳನ್ನು ಪಾಲಿಸಲಾಗುತ್ತಿದೆ. ಮತ್ತು ಲೆಕ್ಕಪತ್ರ ನಿರ್ವಹಣೆಯನ್ನು ಮಾಡಲಾಗುತ್ತಿದೆ.

**ಬಿಸಿ ಊಟದಲ್ಲಿ ಅನುಸರಿಸುತ್ತಿರುವ 3 ಸೂತ್ರಗಳು :-**

**ಶುಚಿತ್ವ:-**

* **ಪಾತ್ರೆ ಪರಿಕರಗಳು** * **ಆಹಾರ ಧಾನ್ಯಗಳು** * **ತರಕಾರಿಗಳು** * **ಅಡುಗೆ ಮನೆ**
* **ಶುದ್ಧನೀರು** * **ಅಡುಗೆಯವರ ಸ್ವಚ್ಛತೆ**

**ಸುರಕ್ಷತೆ:**

* ಅಡುಗೆ ಅನಿಲದ ಒಲೆಗಳನ್ನು ಬಳಸುವುದು. * ರೆಗ್ಯೂಲೇಟರ್ ಅಳವಡಿಕೆ
* ಅನಿಲ ಒಲೆಗಳನ್ನು ಹಚ್ಚುವುದು. * ಬಿಸಿ ಪಾತ್ರೆಗಳನ್ನು ಇಳಿಸುವಾಗ
* ಅಡುಗೆ ಮಾಡುವ ಸ್ಥಳದಲ್ಲಿ ಯಾವ ಮಕ್ಕಳನ್ನೂ ಕೂರಿಸಬಾರದು.

**ಮಿತವ್ಯಯ**

- ಅಡುಗೆ ಅನಿಲದ ಸೋರುವಿಕೆ ತಡೆಗಟ್ಟುವುದು.
- ಆಹಾರ ಧಾನ್ಯಗಳ ಸರಿಯಾದ ಬಳಕೆ
- ಮಕ್ಕಳ ಸಂಖ್ಯೆಗನುಗುಣವಾಗಿ ಆಹಾರ ತಯಾರಿಕೆ
- ಆಹಾರ ಧಾನ್ಯ ಹಾಳಾಗದಂತೆ ಎಚ್ಚರವಹಿಸುವುದು.
- ಎಲ್ಲಾ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡ ನಂತರ ಅನಿಲದ ಒಲೆಗಳನ್ನು ಹಚ್ಚುವುದು.

ಪ್ರತಿ ಮಗುವಿಗೆ ಪ್ರತಿ ದಿವಸಕ್ಕೆ ನೀಡಲಾಗುತ್ತಿರುವ ಆಹಾರ ಪದಾರ್ಥಗಳ ವಿವರ:-

| ಆಹಾರ ಪದಾರ್ಥಗಳು | (ಪರಿಮಾಣ ಗ್ರಾಂಗಳಲ್ಲಿ) | | |
|---|---|---|---|
| | 1–5 ನೇ ತರಗತಿ | 6–8ನೇ ತರಗತಿ | 9–10ನೇ ತರಗತಿ |
| ಅಕ್ಕಿ | 100 ಗ್ರಾಂ | 150 ಗ್ರಾಂ | 150 ಗ್ರಾಂ |
| ಬೇಳೆಕಾಳುಗಳು | 20 ಗ್ರಾಂ | 30 ಗ್ರಾಂ | 30 ಗ್ರಾಂ |
| ಎಣ್ಣೆ | 05 ಗ್ರಾಂ | 7.5 ಗ್ರಾಂ | 7.5 ಗ್ರಾಂ |
| ಉಪ್ಪು | 02 ಗ್ರಾಂ | 04 ಗ್ರಾಂ | 04 ಗ್ರಾಂ |
| ತರಕಾರಿ | 50 ಗ್ರಾಂ | 75 ಗ್ರಾಂ | 75 ಗ್ರಾಂ |
| ಸಾದಿಲ್ವಾರು | 0.60 ಪೈಸೆ | 0.90 ಪೈಸೆ | 0.90 ಪೈಸೆ |

ಬಿಸಿಯೂಟ ನೀಡುವುದರ ಜೊತೆಗೆ ಮಕ್ಕಳ ಪೌಷ್ಠಿಕತೆಯನ್ನು ಹೆಚ್ಚಿಸಲು ಆರೋಗ್ಯ ಮತ್ತು ಕಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಈ ಕೆಳಕಂಡ ಮಾತ್ರೆಗಳನ್ನು ನೀಡಲಾಗುತ್ತಿದೆ.

1. **ಆಲ್ಬಂಡಾಜೋಲ್** (400 ಎಂ.ಜಿ): (ಜಂತುಹುಳು ನಿವಾರಕ)

   ಪ್ರತಿ ಮಗುವಿಗೆ 1 ಮಾತ್ರೆಯಂತೆ ಊಟದ ನಂತರ ಆರು ತಿಂಗಳಿಗೊಂದರಂತೆ ವರ್ಷಕ್ಕೆ 2 ಮಾತ್ರೆ (ಎರಡು ಸಾರಿ) ನುಂಗಿಸಬೇಕು.

2. **ಎ ಅನ್ನಾಂಗ ಕ್ಯಾಪ್ಸೂಲ್** (2,00,000 ಐ.ಯು.)

ಪ್ರತೀ ಮಗುವಿಗೆ ಒಂದು ಕ್ಯಾಪ್ಸೂಲ್‌ನಂತೆ (2,00,000 ಐ.ಯು.) ಆರು ತಿಂಗಳಿಗೊಮ್ಮೆ ವರ್ಷಕ್ಕೆ ಎರಡು ಕ್ಯಾಪ್ಸೂಲ್‌ಗಳನ್ನು ಊಟದ ನಂತರ ಕೊಡುವುದು. (ನುಂಗಿಸಬೇಕು) ಎ ಅನ್ನಾಂಗ ಕ್ಯಾಪ್ಸೂಲ್‌ನ್ನು ಅಲ್ಬೆಂಡಾಜೋಲ್ ಕೊಟ್ಟ ವಾರದ ನಂತರ ಕೊಡಬೇಕು.

3. **ಕಬ್ಬಿಣಾಂಶ ಮತ್ತು ಫೋಲಿಕ್ ಆಮ್ಲ ಮಾತ್ರೆ**

(20 ಮಿ. ಗ್ರಾಂ. ಮೂಲ ಕಬ್ಬಿಣಾಂಶ)

ಪ್ರತಿ ಮಗುವಿಗೆ ದಿನಕ್ಕೊಂದರಂತೆ ವಾರದಲ್ಲಿ ಮೂರು ದಿವಸಗಳಿಗೆ ಮೂರು ಮಾತ್ರೆಗಳನ್ನು ಊಟವಾದ ಮೇಲೆ ನುಂಗಿಸಬೇಕು. ಇದೇ ರೀತಿ 36 ವಾರಗಳಿಗೆ ಕೊಡಬೇಕು. ಒಂದು ವರ್ಷಕ್ಕೆ ಒಟ್ಟು 108 ಮಾತ್ರೆಗಳನ್ನು ನುಂಗಿಸಬೇಕು. ಎಲ್ಲಾ ಮಾತ್ರೆಗಳನ್ನು ಕೊಟ್ಟ ನಂತರ ವಿದ್ಯಾರ್ಥಿಗಳ ಆರೋಗ್ಯ ಕೈಪಿಡಿಯಲ್ಲಿ ದಿನಾಂಕ ಹಾಗೂ ಮಾತ್ರೆಗಳ ಸಂಖ್ಯೆಯನ್ನು ದಾಖಲಿಸಬೇಕು.

**ಅಡುಗೆಯವರು :-**

ಮಕ್ಕಳ ಸಂಖ್ಯೆಗನುಗುಣವಾಗಿ ಅಡಿಗೆ ಸಿಬ್ಬಂದಿಯನ್ನು ಶಾಲಾವಾರು ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ಸಿಬ್ಬಂದಿಗೆ ಪೂರ್ಣ ಕಾರ್ಯನಿರ್ವಹಿಸಿದ ತಿಂಗಳ ಅವಧಿಗೆ ಒಂದು ದಿನದ ರಜೆ ಪಡೆಯಲು ಅರ್ಹರಿರುತ್ತಾರೆ. ಆದರೆ ಎಲ್ಲಾ ಸಿಬ್ಬಂದಿಯು ಒಟ್ಟಿಗೇ ರಜೆ ಹಾಕುವಂತಿಲ್ಲ. ರಜೆ ಹೋದ ಸಿಬ್ಬಂದಿಯ ಕೆಲಸವನ್ನು ಉಳಿದವರು ನಿರ್ವಹಿಸಬೇಕು. ಇದಕ್ಕೆ ಯಾವುದೇ ಹೆಚ್ಚುವರಿ ಸಂಭಾವನೆ ಅಥವಾ ರಿಯಾಯಿತಿ ಇರುವುದಿಲ್ಲ. ರಜೆ ಇಲ್ಲದೆ ಕೆಲಸಕ್ಕೆ ಗೈರು ಹಾಜರಾದರೆ ಆ ದಿನದ ಸಂಭಾವನೆಯನ್ನು ಬಿಟ್ಟು ಶಾಲೆ ಕಾರ್ಯನಿರ್ವಹಿಸಿದ ದಿನಗಳಿಗೆ ಅನುಗುಣವಾಗಿ ಸಂಭಾವನೆ ಲೆಕ್ಕಾಚಾರ ಮಾಡಲಾಗುವುದು. ಅಡುಗೆ ಸಿಬ್ಬಂದಿ ಇತರೆ ಯಾವುದೇ ಭತ್ಯೆಗಳಿಗಾಗಲೀ ಅಥವಾ ರಜಾ ಸೌಲಭ್ಯಗಳಿಗಾಗಲೀ ಅರ್ಹರಿರುವುದಿಲ್ಲ.

**ಅಡುಗೆ ಸಿಬ್ಬಂದಿ ನೇಮಕಾತಿ:-**

ಅಡುಗೆ ಸಿಬ್ಬಂದಿಯ ಆಯ್ಕೆಗಾಗಿ ಗ್ರಾಮ ಮತ್ತು ನಗರಪಾಲಿಕೆ ವಾರ್ಡ್ ಮಟ್ಟದಲ್ಲಿ ರಚಿಸಲಾದ ತ್ರಿಸದಸ್ಯ ಸಮಿತಿಯು ಅಕ್ಷರ ದಾಸೋಹ ಕಾರ್ಯಕ್ರಮ ಮಾರ್ಗಸೂಚಿಯಂತೆ ಆಯ್ಕೆ ಮಾಡುತ್ತಾರೆ.

1. ಗ್ರಾಮ ಪಂಚಾಯತ್‌ಗಳಲ್ಲಿ ಅಧ್ಯಕ್ಷರು ಹಾಗೂ ಮುನಿಸಿಪಾಲಿಟಿ / ನಗರಸಭೆ / ನಗರಪಾಲಿಕೆಗಳಲ್ಲಿ ವಾರ್ಡ್ ಸದಸ್ಯರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.
2. ಎಸ್.ಡಿ.ಎಂ.ಸಿ. ಅಧ್ಯಕ್ಷರು-ಸದಸ್ಯರು.
3. ಶಾಲೆಯ ಮುಖ್ಯೋಪಾಧ್ಯಾಯರು - ಸದಸ್ಯರು

4. ನಗರಸಭೆಗಳಲ್ಲಿ ವಾರ್ಡ್‌ನ ಮುಖ್ಯಾಧಿಕಾರಿ / ಮುನಿಸಿಪಾಲಿಟಿ ಮುಖ್ಯಸ್ಥರು / ಗ್ರಾಮ ಪಂಚಾಯತ್ ಕಾರ್ಯದರ್ಶಿ – ಸಮಿತಿ ಕಾರ್ಯದರ್ಶಿ.

ಒಂದು ವೇಳೆ ಅಡುಗೆ ಸಿಬ್ಬಂದಿಯವರು ದುರ್ನಡತೆ ಪ್ರದರ್ಶಿಸಿದಲ್ಲಿ ವಜಾಗೊಳಿಸುವ ತೀರ್ಮಾನವನ್ನೂ ಸಹ ಮೇಲ್ಕಂಡ ಆಯ್ಕೆ ಸಮಿತಿಯವರೇ ತೆಗೆದುಕೊಳ್ಳುತ್ತಾರೆ.

ಅಡುಗೆಯವರ ಮಾಸಿಕ ಸಂಭಾವನೆ

| | |
|---|---|
| 1. ಮುಖ್ಯ ಅಡುಗೆಯವರು | ರೂ.800/- |
| 2. ಅಡುಗೆಯವರು | ರೂ.550/- |
| 3. ಅಡುಗೆ ಸಹಾಯಕರು | ರೂ.400/- |
| 4. ಸಿ. ಕೇಂದ್ರದ 3ನೇ ಅಡುಗೆಯವರಿಗೆ | ರೂ.500/- |
| ಹಾಗೂ 4ನೇ ಅಡುಗೆಯವರಿಗೆ | ರೂ.400/- |

**ಮುಖ್ಯ ಅಡುಗೆಯವರ ಹಾಗೂ ಅಡುಗೆಯವರ ದಿನಚರಿ.**

| ವೇಳೆ | ಮಾಡಬೇಕಾಗಿರುವ ಕೆಲಸ |
|---|---|
| ಬೆಳಿಗ್ಗೆ 10.00 | ಶಾಲೆಗೆ ಹಾಜರಾಗುವುದು. |
| ಬೆಳಿಗ್ಗೆ 10.00 ರಿಂದ 10.30 | ಅಡುಗೆ ಮನೆ ಪಾತ್ರೆ ಪರಿಕರಗಳ ಸ್ವಚ್ಛತಾ ಕಾರ್ಯ ನಿರ್ವಹಿಸುವುದು. |
| ಬೆಳಿಗ್ಗೆ 10.30 ರಿಂದ 10.45 | ಮುಖ್ಯ ಅಡುಗೆಯವರು ತರಗತಿವಾರು ಹಾಜರಾತಿ ಪಡೆದು ತರಗತಿ ಶಿಕ್ಷಕರಿಂದ ಸಹಿ ಪಡೆಯುವುದು. ಸಹಾಯಕ ಅಡುಗೆಯವರು ಅಡುಗೆ ಸಿದ್ದತೆ ಮಾಡಿಕೊಳ್ಳುವುದು. |
| ಬೆಳಿಗ್ಗೆ 10.45 ರಿಂದ 11.00 | ಆಹಾರ ಧಾನ್ಯಗಳನ್ನು ಹಾಜರಾತಿಗನುಗುಣವಾಗಿ ಅಳತೆ ಮಾಡಿ ತೆಗೆದುಕೊಳ್ಳುವುದು. ಆಹಾರ ಧಾನ್ಯದ ಸ್ವಚ್ಛ ಮಾಡುವುದು ಹಾಗೂ ತರಕಾರಿಯನ್ನು ಅಡುಗೆಗೆ ಸಿದ್ಧಮಾಡಿಕೊಳ್ಳುವುದು. |
| 11.00 ರಿಂದ ಮದ್ಯಾಹ್ನ 12.30 | ಅಡುಗೆ ತಯಾರಿಸುವುದು. |
| ಮದ್ಯಾಹ್ನ 12.30 ರಿಂದ 1.00 | ದಾಸ್ತಾನು ವಹಿ, ಸಾದಿಲ್ವಾರು ನಗದು ಪುಸ್ತಕಗಳಲ್ಲಿ ಪ್ರತಿದಿನದ ಖರ್ಚು-ವೆಚ್ಚಗಳನ್ನು ತಪ್ಪದೇ ಬರೆದು ಸಹಿ ಮಾಡುವುದು. |
| ಮದ್ಯಾಹ್ನ 1.00 ರಿಂದ 1.30 | ಮಕ್ಕಳಿಗೆ ಊಟ ನೀಡುವುದು |
| ಮದ್ಯಾಹ್ನ 1.30 ರಿಂದ 2.00 | ಪಾತ್ರೆ ಪರಿಕರಗಳನ್ನು ಸ್ವಚ್ಛಗೊಳಿಸುವುದು. |

**ಮುಖ್ಯ ಅಡುಗೆಯವರ ಜವಾಬ್ದಾರಿಗಳು :-**

- ಅಡುಗೆ ಕೇಂದ್ರದ ಉತ್ತಮ ನಿರ್ವಹಣೆಯು ಮುಖ್ಯ ಅಡುಗೆಯವರ ಜವಾಬ್ದಾರಿಯಾಗಿರುತ್ತದೆ.
- ಆಹಾರ ಪದಾರ್ಥಗಳನ್ನು ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ/ಕೆ.ಎಫ್.ಸಿ.ಎಸ್.ಸಿ. ರವರಿಂದ ಪಡೆದು ದಾಸ್ತಾನು ಮಾಡುವುದು.
- ಸಾಂಬಾರು ಪದಾರ್ಥಗಳು, ಎಣ್ಣೆ, ಬೇಳೆ, ತರಕಾರಿ ಇತ್ಯಾದಿಗಳನ್ನು ಪಡೆದು ದಾಸ್ತಾನು ಪುಸ್ತಕದಲ್ಲಿ ನಿಯಮಾನುಸಾರ ವಿವರಗಳನ್ನು ನಮೂದಿಸುವುದು.
- ಶಾಲೆಯ ಶಿಕ್ಷಕರಿಂದ ತರಗತಿವಾರು ದೈನಂದಿನ ಮಕ್ಕಳ ಹಾಜರಾತಿಯನ್ನು ಪಡೆಯುವುದು. ಅದರಂತೆ ಅಂದಿನ ಫಲಾನುಭವಿಗಳ ಸಂಖ್ಯೆಯನ್ನು ನಿರ್ಧರಿಸುವುದು. ಕೇಂದ್ರ ಅಡುಗೆ ಮನೆ ಇದ್ದರೆ ದೈನಂದಿನ ಮಕ್ಕಳ ಹಾಜರಾತಿಯನ್ನು ಕೇಂದ್ರಕ್ಕೆ ಜೋಡಣೆಯಾದ ಶಾಲೆಗಳ ಮುಖ್ಯೋಪಾಧ್ಯಾಯರಿಂದ ಪಡೆಯುವುದು.
- ಫಲಾನುಭವಿಗಳ ಸಂಖ್ಯೆಗೆ ತಕ್ಕಂತೆ ಅಡುಗೆ ಪದಾರ್ಥಗಳನ್ನು ಪಡೆಯುವುದು.
- ಪಾತ್ರೆಗಳ ಹಾಗೂ ಇತರೆ ವಸ್ತುಗಳ ನಿರ್ವಹಣೆ.
- ಶುಚಿಯಾದ ಹಾಗೂ ರುಚಿಯಾದ ಆಹಾರ ತಯಾರಿಕೆಯ ಮತ್ತು ಅದರ ಗುಣಮಟ್ಟವನ್ನು ಪರಿಶೀಲಿಸುವುದು.
- ತಯಾರಿಸಿದ ಆಹಾರವನ್ನು ಫಲಾನುಭವಿಗಳಿಗೆ ಆಯಾ ಶಾಲಾ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ವಿತರಿಸುವುದು.
- ಆಹಾರ ಪದಾರ್ಥಗಳಾಗಲೀ, ತಯಾರಿಸಿದ ಆಹಾರವಾಗಲೀ ಹಾಳಾಗದಂತೆ ಮತ್ತು ದುರುಪಯೋಗವಾಗದಂತೆ ನೋಡಿಕೊಳ್ಳುವುದು.
- ಇಡೀ ಅಡುಗೆ ಮನೆ ಹಾಗೂ ಸುತ್ತಮುತ್ತಲ ಪ್ರದೇಶವನ್ನು ಸ್ವಚ್ಛವಾಗಿಡುವುದು. ಆಹಾರ ತಯಾರಿಕೆ ಪೂರ್ವ ಮತ್ತು ನಂತರ ಸ್ವಚ್ಛಗೊಳಿಸುವುದು.
- ಆಹಾರ ಪದಾರ್ಥಗಳ ದಾಸ್ತಾನು, ಖರ್ಚು-ವೆಚ್ಚಗಳ ಲೆಕ್ಕಪತ್ರಗಳನ್ನು ನಿರ್ವಹಿಸುವುದು.
- ಅಡುಗೆ ಸಿಬ್ಬಂದಿಯ ಕೆಲಸಗಳನ್ನು ಸಮನ್ವಯಗೊಳಿಸುವುದು ಹಾಗೂ ಅವರ ಕೆಲಸ ಮೇಲ್ವಿಚಾರಣೆ ನಡೆಸುವುದು.
- ಅಡುಗೆ ಅನಿಲವನ್ನು ಮಿತವಾಗಿ ಬಳಸುವುದು. ಸ್ವಚ್ಛತೆ, ಸುರಕ್ಷತೆ ಹಾಗೂ ಮಿತವ್ಯಯ ಕಾಪಾಡಿಕೊಳ್ಳುವುದು.
- ಮಕ್ಕಳು, ಶಿಕ್ಷಕರು, ಪೋಷಕರು, ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮ ಪಂಚಾಯತ್ ಸದಸ್ಯರೊಂದಿಗೆ ಸೌಜನ್ಯ ಪೂರಕವಾಗಿ ನಡೆದುಕೊಳ್ಳುವುದಲ್ಲದೆ ಇತರೆ ಸಿಬ್ಬಂದಿಯು ಹಾಗೆ ನಡೆದುಕೊಳ್ಳುವಂತೆ ಎಚ್ಚರಿಕೆ ವಹಿಸುವುದು.
- ಸಹಾಯಕ ಅಡುಗೆಯವರಿಗೆ ಕೆಲಸ ಕಾರ್ಯಗಳನ್ನು ಸರಿಯಾಗಿ ಹಂಚುವುದು ಹಾಗೂ ಕೆಲಸದ ಮೇಲ್ವಿಚಾರಣೆ ನೋಡಿಕೊಳ್ಳುವುದು. ಅನುಬಂಧ-'ಖ'ನಲ್ಲಿ ಕೊಡಲಾದ ಎಲ್ಲ ವಹಿಗಳನ್ನು ಹಾಗೂ ಕಡತಗಳನ್ನು ನಿರ್ವಹಿಸಬೇಕು.
- ಮೇಲಾಧಿಕಾರಿಗಳು ಪರಿಶೀಲನೆಗೆ ಅಥವಾ ತಪಾಸಣೆಗೆ ಬಂದಾಗ ಅಗತ್ಯ ಮಾಹಿತಿಗಳನ್ನು ಒದಗಿಸುವುದು.

**ಅಡುಗೆಯವರಿಗೆ ಸಾಮಾನ್ಯ ಷರತ್ತುಗಳು :-**

ಅಡುಗೆಯವರ ಅರ್ಹತೆಯ ವಿವರಗಳು ಹಾಗೂ ಇವರನ್ನು ಕೇಂದ್ರದಲ್ಲಿ ಅಡುಗೆ ತಯಾರಿಸಲು ತೆಗೆದುಕೊಳ್ಳುವ ಮುಂಚೆ ವಿಧಿಸಬೇಕಾದ ಷರತ್ತುಗಳು ಈ ಕೆಳಗಿನಂತಿರುತ್ತವೆ.

- ಇವರು ಯೋಜನೆಯಡಿಯಲ್ಲಿ ಒದಗಿಸಲಾಗುವ ಆಹಾರ ಸಾಮಾಗ್ರಿ, ಸಾಂಬಾರ ಪದಾರ್ಥಗಳು, ಗ್ಯಾಸ್ ಸ್ಟೌವ್ ಮತ್ತು ಗ್ಯಾಸ್ ಸಿಲಿಂಡರ್ / ಉರುವಲು, ಸಾದಿಲ್ವಾರು, ವೆಚ್ಚ ನಿರ್ವಹಣೆ ಇತ್ಯಾದಿ ಜವಾಬ್ದಾರಿಗಳನ್ನು ನಿರ್ವಹಿಸುವಂತಿರಬೇಕು.
- ಇವರು ಜೂನ್‌ನಿಂದ (ಶಾಲೆ ಪ್ರಾರಂಭವಾದ ದಿನದಿಂದ) ಏಪ್ರಿಲ್ 10 ರವರೆಗೆ (ಮಧ್ಯಂತರ ರಜೆಯ ಅವಧಿಯನ್ನು ಹೊರತುಪಡಿಸಿ) ಶಾಲಾ ದಿನಗಳಲ್ಲಿ ಮಾತ್ರ ಹತ್ತು ತಿಂಗಳ ಅವಧಿಗೆ ಮಾತ್ರ ತೆಗೆದುಕೊಳ್ಳಬೇಕು. ವಾರ್ಷಿಕ ರಜೆ ಪ್ರಾರಂಭವಾಗುವ ಹಿಂದಿನ ದಿನ ಇವರನ್ನು ಕರ್ತವ್ಯದಿಂದ ಬಿಡುಗಡೆ ಮಾಡುವುದು.
- ಯಾವುದೇ ಕಾರಣಕ್ಕೂ ಇವರುಗಳ ಸೇವೆಯನ್ನು ಖಾಯಂಗೊಳಿಸುವುದಿಲ್ಲ.
- ಅಡುಗೆಯವರು ಕಡ್ಡಾಯವಾಗಿ ಊರಿನ ಖಾಯಂ ನಿವಾಸಿಗಳಾಗಿರಬೇಕು.
- ಶಾಲಾ ದಿನಗಳಲ್ಲಿ ಅಡುಗೆ ತಯಾರಿ, ವಿತರಣೆ, ಸ್ವಚ್ಛತೆ, ಸಾಮಗ್ರಿಯ ನಿರ್ವಹಣೆ, ಕಡತ/ನಗದು ನಿರ್ವಹಣೆಗೆ ಸಂಬಂಧಿಸಿದಂತೆ ಇವರಿಗೆ ವಹಿಸಿರುವ ಕೆಲಸವನ್ನು ಚಾಚೂ ತಪ್ಪದೇ ಮಾಡಬೇಕು.
- ಮಕ್ಕಳು ಹಾಗೂ ಶಿಕ್ಷಕರೊಂದಿಗೆ ಸೌಜನ್ಯದಿಂದ ಹಾಗೂ ವಿನಮ್ರತೆಯಿಂದ ನಡೆದುಕೊಳ್ಳಬೇಕು.
- ಶಾಲೆ ಪ್ರಾರಂಭವಾಗುವ ಮೊದಲೇ ಶಾಲಾ ಆವರಣದಲ್ಲಿದ್ದು, ಅಡುಗೆ ತಯಾರಿಕೆಗೆ ಸಿದ್ದತೆಯನ್ನು ಮಾಡಿಕೊಳ್ಳುವುದು.
- ಬಿಸಿಊಟ ತಯಾರಿಸಲು ನೀಡಲಾದ ಅಡುಗೆ ಪಾತ್ರೆಗಳು, ಮತ್ತಿತರ ಸಲಕರಣೆಗಳಿಗೆ ಸಂಪೂರ್ಣ ಜವಾಬ್ಧಾರಿ ಹಾಗೂ ನಿರ್ವಹಣೆ ಅಡುಗೆ ಸಿಬ್ಬಂದಿಯದಾಗಿರುತ್ತದೆ.
- ಅಡುಗೆ ಸಿಬ್ಬಂದಿಯ ಮಾಸಿಕ ಗೌರವ ಧನವು ಮಾರ್ಗಸೂಚಿಯಂತೆ ಇರುತ್ತದೆ.
- ಈ ಮಾಸಿಕ ಗೌರವಧನ ಬಿಟ್ಟರೆ ಅಡುಗೆ ಸಿಬ್ಬಂದಿಯು ಬೇರೆ ಯಾವುದೇ ರೀತಿಯ ಸಂಭಾವನೆಗೆ ಅರ್ಹರಾಗಿರುವುದಿಲ್ಲ.
- ಅಡುಗೆ ಸಿಬ್ಬಂದಿಯ ಸಂಭಾವನೆಯನ್ನು ಬ್ಯಾಂಕ್ ಖಾತೆಯ ಮೂಲಕ/ಚೆಕ್ ಮೂಲಕ ನೀಡಲಾಗುವುದು.
- ಯಾರೇ ಅಡುಗೆ ಸಿಬ್ಬಂದಿಯು ಅವರಿಗೆ ಒದಗಿಸಲಾದ ಸಾಮಗ್ರಿಗಳನ್ನು ದುರುಪಯೋಗ ಮಾಡಿರುವುದು ಅಥವಾ ಇತರೆ ದುರ್ನಡತೆ, ನಿರ್ಲಕ್ಷತನ ಕಂಡುಬಂದಲ್ಲಿ ತಕ್ಷಣದಿಂದ ಅವರನ್ನು ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇರೆಗೆ ಗ್ರಾಮ ಪಂಚಾಯಿತಿ, ಮುನಿಸಿಪಾಲಿಟಿ ನಗರಸಭೆ ವಜಾ ಮಾಡುವುದು.
- ಅಡುಗೆ ಸಿಬ್ಬಂದಿಯು ವಾರದ ರಜೆ ಹಾಗೂ ಸರ್ಕಾರಿ ರಜೆಗಳಿಗೆ ಅರ್ಹರಿರುತ್ತಾರೆ.
- ಈ ಯೋಜನೆಯಡಿ ತೆಗೆದುಕೊಳ್ಳಲಾದ ಅಡುಗೆ ಸಿಬ್ಬಂದಿಯವರು ಪೂರ್ತಿ ಮಾಡಿದ ಒಂದು ತಿಂಗಳ ಅವಧಿಗೆ ಒಂದು ದಿನದಂತೆ ರಜೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಎಲ್ಲಾ ಸಿಬ್ಬಂದಿ ಒಟ್ಟಿಗೆ ರಜೆ ಹಾಕುವಂತಿಲ್ಲ. ರಜೆ ಹೋದ ಸಿಬ್ಬಂದಿಯ ಕೆಲಸವನ್ನು ಉಳಿದ ಸಿಬ್ಬಂದಿಯು ನಿರ್ವಹಿಸಬೇಕು. ಈ ಬಗ್ಗೆ ಯಾವುದೇ ಹೆಚ್ಚುವರಿ ಸಂಭಾವನೆಯಾಗಲೀ, ವಿಶೇಷ ರಿಯಾಯಿತಿ ಆಗಲಿ ಇರುವುದಿಲ್ಲ.

- ಅರ್ಹತೆಯಿರುವ ಒಂದು ದಿನದ ರಜೆಯನ್ನು ಹೊರತುಪಡಿಸಿ ಗೈರು ಹಾಜರಾದ ದಿನಗಳಿಗೆ ಆ ತಿಂಗಳಲ್ಲಿನ ಶಾಲಾ ದಿನಗಳಿಗನುಗುಣವಾಗಿ ಸಂಭಾವನೆಯನ್ನು ಸೂಕ್ತವಾಗಿ ಕಡಿತಗೊಳಿಸಲಾಗುವುದು.
- ಅಡುಗೆ ಸಿಬ್ಬಂದಿಯು ಇತರ ಯಾವುದೇ ಭತ್ಯೆಗಳಾಗಲೀ, ರಜಾ ಸೌಲಭ್ಯಗಳಿಗಾಗಲೀ ಅರ್ಹರಿರುವುದಿಲ್ಲ.

**ಅಕ್ಷರ ದಾಸೋಹ ಅಡುಗೆ ಕೇಂದ್ರದಲ್ಲಿ ನಿರ್ವಹಿಸಬೇಕಾದ ವಹಿಗಳು ಹಾಗೂ ಕಡತಗಳು.**

1. ಬ್ಯಾಂಕ್ ಪಾಸ್ ಪುಸ್ತಕ
2. ಸಂದರ್ಶಕರ ಪುಸ್ತಕ
3. ದೈನಂದಿನ ಹಾಜರಾತಿ ವಹಿ (ತರಗತಿವಾರು ಕ್ರೋಢೀಕರಣದ ತಃಖ್ತೆ) ರುಚಿ ದೃಢೀಕರಣ
4. ಆಹಾರ ಧಾನ್ಯಗಳ ದಾಸ್ತಾನು ವಹಿ
5. ಖಾಯಂ ವಸ್ತುಗಳ ದಾಸ್ತಾನು ವಹಿ
6. ಸಾದಿಲ್ವಾರು ನಗದು ಪುಸ್ತಕ
7. ಮದ್ಯಾಹ್ನ ಬಿಸಿಯೂಟದ ಯೋಜನಾ ಸಿಬ್ಬಂದಿಯ ಹಾಜರಾತಿ ಬಟವಾಡೆ ವಹಿ
8. ತಪಾಸಣಾ ಹಾಗೂ ಅನುಪಾಲನಾ ಪುಸ್ತಕ
9. ಉಸ್ತುವಾರಿ ಅಧಿಕಾರಿಗಳ ಆದೇಶಗಳ / ಸುತ್ತೋಲೆಗಳ ಕಡತ.

**ಸಮತೋಲನ ಆಹಾರ:**

ನಮ್ಮ ದೇಹದ ನಾನಾ ಕ್ರಿಯೆಗಳಿಗೆ ಸವೆದು ಹೋದ ಅಂಗಾಂಶಗಳನ್ನು ಸರಿದೂಗಿಸಲು ಅವಶ್ಯವಿರುವಷ್ಟು ಪಿಷ್ಠ, ಸಸಾರಜನಕ, ಕೊಬ್ಬು, ಖನಿಜಗಳು, ಅನ್ನಾಂಗ ಪ್ರಮಾಣ ಮತ್ತು ಗುಣಮಟ್ಟ ಸಮರ್ಪಕವಾಗಿರುವ ಆಹಾರಕ್ಕೆ ಸಮತೋಲನ ಆಹಾರವೆಂದು ಕರೆಯುತ್ತಾರೆ.

## ಶುಚಿತ್ವ

**1. ಶುಚಿತ್ವ ಎಂದರೇನು ?**

ಮನುಷ್ಯನಿಗೆ ಬರಬಹುದಾದ ಬಹುತೇಕ ಸಾಂಕ್ರಾಮಿಕ ರೋಗಗಳಿಗೆ ಮನುಷ್ಯನೇ ಕಾರಣ, ಅಂದರೆ ಈ ರೋಗಕಾರಕ ಕ್ರಿಮಿಗಳು ಅವನ ಶರೀಕರದಲ್ಲಿ ಇದ್ದು ವಿವಿಧ ವಿಸರ್ಜನೆಗಳಲ್ಲಿ (ಮಲ, ಮೂತ್ರ, ಉಗುಳು, ಕಫ, ರಕ್ತ, ಕೀವು ಇತ್ಯಾದಿ) ಹೊರ ಬೀಳುತ್ತಿರುತ್ತವೆ. ವ್ಯಕ್ತಿ ನೈರ್ಮಲ್ಯವನ್ನು ಕಾಪಾಡಿಕೊಳ್ಳದಿದ್ದರೆ ಈ ಕ್ರಿಮಿಗಳು ಮತ್ತೊಬ್ಬನ ಶರೀರದಲ್ಲಿ ಸೇರಿ ಅಥವಾ ಆಹಾರ ಪಾನೀಯಗಳಲ್ಲಿ ಸೇರಿ ರೋಗವನ್ನು ಹರಡಬಹುದು. ಆದುದರಿಂದ ಅಡುಗೆ ಮಾಡುವವರು, ಬಡಿಸುವವರು ವೈಯಕ್ತಿಕವಾಗಿ ಒಳ್ಳೆಯ ಅಭ್ಯಾಸಗಳು ಮತ್ತು ಶುಭ್ರತೆಗೆ ಹೆಚ್ಚು ಗಮನ ಕೊಡುವುದರಿಂದ ಅನೇಕ ರೋಗಗಳನ್ನು ತಡೆಯಬಹುದು.

2. **ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ?**

- ಅಡುಗೆ ಮಾಡುವವರು ಸ್ವತಃ ತಾವು ಮೊದಲು ಶುಚಿತ್ವವನ್ನು ಕಾಪಾಡಿಕೊಳ್ಳಬೇಕು. (ಉಡುಪು, ಕೂದಲು, ಉಗುರು, ಕಣ್ಣು, ಮೂಗು, ಕೈಕಾಲು ಇತ್ಯಾದಿಗಳನ್ನು ಶುದ್ಧವಾಗಿಟ್ಟುಕೊಳ್ಳುವ ಮೂಲಕ)
- ಕೂದಲನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಅಡುಗೆ ಮಾಡುವಾಗ ಶುಭ್ರವಾದ ಬಟ್ಟೆಯನ್ನು ತಲೆಗೆ ಕಟ್ಟಿಕೊಳ್ಳಬೇಕು.
- ಯಾವಾಗಲೂ ಶುಭ್ರವಾದ ಕಾಟನ್ ಹತ್ತಿ ಬಟ್ಟೆಯ ಉಡುಪನ್ನು ಧರಿಸಬೇಕು.
- ಸೀನುವಾಗ, ಕರವಸ್ತ್ರವನ್ನು ಮೂಗಿಗೆ ಅಡ್ಡವಾಗಿಟ್ಟು ಉಪಯೋಗಿಸಬೇಕು ಮತ್ತು ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು.

| | | | |
|---|---|---|---|
| 1. | ವ್ಯಕ್ತಿ | : | ತಲೆಯಿಂದ ಕಾಲಿನವರೆಗೆ ಅನೇಕ ಕ್ರಿಮಿಗಳು ನೆಲೆಸಿರುತ್ತವೆ. ಆದುದರಿಂದ ಪ್ರತಿನಿತ್ಯ ಸೋಪು ಅಥವಾ ಸೀಗೆಪುಡಿಯನ್ನು ಬಳಸಿ ಸ್ನಾನ ಮಾಡಬೇಕು. |
| 2. | ಬಾಯಿ | : | ಬಾಯಿ, ನಾಲಿಗೆ ಮತ್ತು ಹಲ್ಲನ್ನು ಪ್ರತಿದಿನ ಬೆಳಿಗ್ಗೆ, ಸಾಯಂಕಾಲ ಚೆನ್ನಾಗಿ ಉಜ್ಜಿ ತೊಳೆಯಬೇಕು. |
| 3. | ಕೈಗಳು | : | ಕೈಗಳನ್ನು ಚೊಕ್ಕಟವಾಗಿ ತೊಳೆಯಬೇಕು. ಊಟಕ್ಕೆ ಮುನ್ನ ಆಹಾರವನ್ನು ಬಡಿಸುವ ಮುನ್ನ ಮಲ ಮೂತ್ರ ವಿಸರ್ಜನೆಯ ನಂತರ ಕಡ್ಡಾಯವಾಗಿ ಸೋಪಿನಿಂದ ಕೈಗಳನ್ನು ತೊಳೆದುಕೊಳ್ಳಬೇಕು. ನಶ್ಯ, ಎಲೆ ಅಡಿಕೆ, ಹೊಗೆಸೊಪ್ಪು ಇತ್ಯಾದಿಗಳನ್ನು ಶಾಲೆಯ ಆವರಣದಲ್ಲಿ ಉಪಯೋಗಿಸಬಾರದು. |
| 4. | ಪಾದಗಳು | : | ಕಾಲುಗಳನ್ನು ಸ್ವಚ್ಛವಾಗಿ ತೊಳೆಯದಿದ್ದಲ್ಲಿ ಅನೇಕ ರೋಗಗಳನ್ನು ಹರಡಲು ಸಹಾಯ ಮಾಡುತ್ತವೆ. |
| 5. | ಉಗುರುಗಳು | : | ಶುಭ್ರವಾಗಿಡಬೇಕು. ಸಮವಾಗಿ ಕತ್ತರಿಸಬೇಕು. ಇಲ್ಲದಿದ್ದರೆ ಉಗುರು ಸಂದುವಿನಲ್ಲಿ ಕೊಳೆ ಸೇರಿ ರೋಗ ಹರಡಲು ಅವಕಾಶವಾಗುತ್ತದೆ. ಕೈ ಬೆರಳುಗಳನ್ನು ಬಾಯಿ ಮತ್ತು ಮೂಗಿನಲ್ಲಿ ಹಾಕಬಾರದು. ಉಗುರುಗಳನ್ನು ಹಲ್ಲಿನಿಂದ ಕಚ್ಚಬಾರದು. ಆಹಾರ ವಿಷ ಸೋಂಕಿಗೆ ಅನೇಕ ವೇಳೆ ಉಗುರುಗಳೇ ಮೂಲ. |
| 6. | ಕಣ್ಣು | : | ಉರಿಗಣ್ಣು ಬಂದಾಗ ತಕ್ಷಣ ಚಿಕಿತ್ಸೆ ಕೊಡಿಸಬೇಕು. |
| 7. | ಕಿವಿ ಮತ್ತು ಮೂಗು | : | ಕಿವಿಯನ್ನು ಮತ್ತು ಮೂಗನ್ನು ಶುಭ್ರವಾಗಿಟ್ಟುಕೊಳ್ಳಬೇಕು. |

1) **ಆಹಾರ ಪದಾರ್ಥಗಳ ಶುಚಿತ್ವ:**

- ಅಡುಗೆಗೆ ಬಳಸುವ ಆಹಾರ ಪದಾರ್ಥ, ನೀರು, ಅಡುಗೆ ಕೋಣೆ, ಪಾತ್ರೆ ಪರಿಕರ ಇವೆಲ್ಲವನ್ನು ಶುದ್ಧವಾಗಿಟ್ಟುಕೊಳ್ಳುವುದು ಅಂದರೆ ಅಡುಗೆ ಮನೆ ಶುದ್ಧೀಕರಿಸಿ, ಆಹಾರ ಪದಾರ್ಥಗಳನ್ನು ಪಾತ್ರೆಗಳನ್ನು ಸ್ವಚ್ಛ ಮಾಡಿ ಶುದ್ಧವಾದ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವುದು.
- ಆಯಾ ದಿನಗಳಲ್ಲಿ ಬಳಕೆ ಮಾಡುವ ಆಹಾರ ಪದಾರ್ಥಗಳನ್ನು ಮೊದಲೇ ಸ್ವಚ್ಛ ಮಾಡಿ ಅಡುಗೆಗೆ ಬಳಸುವ ಮುನ್ನ ತೊಳೆದು ಬಳಸುವುದು.
- ಪಾತ್ರೆ, ಪರಿಕರಗಳನ್ನು ಶುದ್ಧವಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.
- ಆಹಾರ ಸಿದ್ಧಪಡಿಸುವ ಮೊದಲು ಆಹಾರ ಧಾನ್ಯಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕು. ಆಹಾರ ಧಾನ್ಯಗಳ ನಿರ್ವಹಣೆ, ತರಕಾರಿಗಳನ್ನು ಸಿದ್ಧಪಡಿಸಿಕೊಳ್ಳುವುದು.

2) **ಪಾತ್ರೆ ಪರಿಕರಗಳಿಂದ ಆಹಾರ ಕೆಡುವುದನ್ನು ಹೇಗೆ ತಡೆಯಬಹುದು ?**

- ಅಡುಗೆ ಮಾಡುವ ಪಾತ್ರೆಗಳ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು.
- ಹಿತ್ತಾಳೆ ಅಥವಾ ತಾಮ್ರದ ಪಾತ್ರೆಗಳನ್ನು ಕನಿಷ್ಠ 6 ತಿಂಗಳಿಗೊಮ್ಮೆ ಕಲಾಯಿ ಮಾಡಿಸಿ ಉಪಯೋಗಿಸುವುದು.
- ಪ್ರತಿದಿನ ಆಹಾರವನ್ನು ವಿತರಿಸಿದ ನಂತರ ಪಾತ್ರೆಗಳನ್ನು ಸ್ವಚ್ಛವಾಗಿ ತೊಳೆದು ಇಡುವುದು.
- ಅಡುಗೆ ಮಾಡುವ ಮೊದಲು ಪಾತ್ರೆಗಳನ್ನು ಸ್ವಚ್ಛವಾಗಿ ತೊಳೆದು ಉಪಯೋಗಿಸುವುದು.
- ಪಾತ್ರೆಗಳು ತೊಳೆದು ಒಣಗಲು ಬೋರಲು ಹಾಕಿಡುವುದು.
- ಆಹಾರವನ್ನು ಬಡಿಸುವಾಗ ಅನ್ನದ ಕೈ ಅಥವಾ ಕೈ ಬಟ್ಟಲನ್ನು ಮಾತ್ರ ಉಪಯೋಗಿಸುವುದು.

3) **ಅಡುಗೆ ತಯಾರಿಕೆ:–**

- ಆಹಾರ ಪದಾರ್ಥಗಳನ್ನು ಸರಿಯಾಗಿ ಬೇಯಿಸಬೇಕು.
- ಶುಚಿ–ರುಚಿ ಕಾಪಾಡಬೇಕು.
- ಸಾಮಗ್ರಿಗಳು ಚೆಲ್ಲದಂತೆ ನೋಡಿಕೊಳ್ಳಬೇಕು.
- ತರಕಾರಿಗಳನ್ನು ಹೆಚ್ಚುವ ಮುನ್ನ ತೊಳೆಯಬೇಕು. ಹೆಚ್ಚಿ ತೊಳೆಯಬಾರದು. ತರಕಾರಿಗಳನ್ನು ನೀರಿನಲ್ಲಿ ನೆನೆಸಿಡಬಾರದು. ಅಡುಗೆಗೆ ಮೊದಲು ತರಕಾರಿ ಸಿದ್ಧಪಡಿಸಿಕೊಳ್ಳಬೇಕು.

4) **ಬಿಸಿಯೂಟ ಸ್ವೀಕರಿಸುವ ಮುನ್ನ ಹಾಗೂ ನಂತರ ಮಕ್ಕಳು ಅನುಸರಿಸಬೇಕಾದ ಕ್ರಮಗಳು :–**

- ಮಕ್ಕಳು ಉಪಯೋಗಿಸುವ ತಟ್ಟೆ ಲೋಟವನ್ನು ಊಟಕ್ಕೆ ಮೊದಲು ಹಾಗೂ ನಂತರ ನೀರಿನಿಂದ ಸ್ವಚ್ಛಗೊಳಿಸುವುದು (ಬಿಸಿನೀರು ಬಳಸಿದರೆ ಉತ್ತಮ)

- ಊಟಕ್ಕೆ ಮೊದಲು ಮತ್ತು ಊಟದ ನಂತರ ಮಕ್ಕಳು ಕೈಕಾಲುಗಳನ್ನು ತೊಳೆಯುವಂತೆ ಸೂಚನೆ ನೀಡಿ ತೊಳೆದುಕೊಳ್ಳುವಂತೆ ನೋಡಿಕೊಳ್ಳುವುದು.
- ಸಾಲಾಗಿ ನಿಲ್ಲುವುದು, ಸಾಲಾಗಿ ಕೂರುವುದು, ನುಗ್ಗಾಟ ಇಲ್ಲದಿರುವಂತೆ ನೋಡಿಕೊಳ್ಳುವುದು.
- ಆಹಾರ ಸೇವಿಸುವಾಗ ಆಹಾರವನ್ನು ಚೆಲ್ಲದಂತೆ ನೋಡಿಕೊಳ್ಳುವುದು.
- ಊಟದ ಸಮಯದಲ್ಲಿ ಕೋಳಿ, ನಾಯಿ, ಮತ್ತಿತರ ಪ್ರಾಣಿಗಳು, ನೊಣ ಇತರೆ ಕ್ರಿಮಿಕೀಟಗಳು ಬಾರದಂತೆ ನೋಡಿಕೊಳ್ಳುವುದು.
- ಇದೆಲ್ಲದರ ಬಗ್ಗೆ ಶಾಲೆಯ ಶಿಕ್ಷಕರ ಸಹಕಾರ ಪಡೆಯುವುದು.

## ಸುರಕ್ಷತೆ :-

**1) ಅಡುಗೆ ಸಿಲಿಂಡರ್ ಬಳಸುವ ಬಗೆ:-**

- ಸಿಲಿಂಡರನ್ನು ಭೂಮಿಯ ಸಮತಟ್ಟಾದ ಜಾಗದ ಮೇಲೆ ನೇರವಾಗಿಯೇ ಇಡಬೇಕು.
- ಸಿಲಿಂಡರ್ ಮೇಲೆ ಯಾವುದೇ ವಸ್ತುಗಳನ್ನು ಇಡದಂತೆ ಎಚ್ಚರ ವಹಿಸಬೇಕು.
- ಅಡುಗೆ ಅನಿಲದ ಒಲೆಯ ಮೇಲೆ ಐ.ಎಸ್.ಐ. ಮುದ್ರೆ ಇರಬೇಕು.
- ರಬ್ಬರ್ ಟ್ಯೂಬ್ ಉತ್ತಮ ಸ್ಥಿತಿಯಲ್ಲಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.
- ರೆಗ್ಯುಲೇಟರ್ ಒತ್ತಡ ಸರಿಯಾಗಿದೆಯೇ ಎಂದು ಜ್ವಾಲೆಯನ್ನು ವೀಕ್ಷಿಸಿ ಪರೀಕ್ಷಿಸುವುದು. ಒತ್ತಡ ಅಧಿಕವಾದಲ್ಲಿ ಜ್ವಾಲೆ ಎತ್ತರವಾಗಿ ಕಾಣುತ್ತದೆ ಮತ್ತು ಕಡಿಮೆ ಇದ್ದಲ್ಲಿ ಜ್ವಾಲೆಯು ತೀರಾ ಕೆಳಮಟ್ಟದಲ್ಲಿ ಉರಿಯುತ್ತದೆ. ಸರಿಯಾದ ಒತ್ತಡವು ರೆಗ್ಯುಲೇಟರ್‌ನಲ್ಲಿ ಬರುತ್ತಿದ್ದಲ್ಲಿ ನೀಲಿ ಮಿಶ್ರಿತ ಹಸಿರು ಜ್ವಾಲೆಯು ಕಂಡುಬರುತ್ತದೆ. ಇದು ಸರಿ ಇಲ್ಲದಿದ್ದಲ್ಲಿ ತಕ್ಷಣ ರೆಗ್ಯುಲೇಟರ್ ಬದಲಾಯಿಸಬೇಕು.
- ಅಡುಗೆ ಮಾಡುವ ಸ್ಥಳದಲ್ಲಿ ಮಕ್ಕಳನ್ನು ಕೂರಿಸಬಾರದು.
- ಅನಿಲದ ಸಿಲಿಂಡರ್ ಇರುವ ಜಾಗದಲ್ಲಿ ಸಾಕಷ್ಟು ಗಾಳಿ ಬೆಳಕಿರಬೇಕು.
- ಅಡುಗೆ ಮಾಡುವಾಗ ಮಾತ್ರ ರೆಗ್ಯುಲೇಟರ್‌ನ್ನು ಆನ್ ಮಾಡಿ ಬಳಸಿ, ಅಡುಗೆ ಆದ ನಂತರ ರೆಗ್ಯುಲೇಟರ್ ಆಫ್ ಮಾಡಬೇಕು.

**2) ಅಡುಗೆ ಅನಿಲ ಸಿಲಿಂಡರ್ ಸಿಡಿದು ಉಂಟಾಗುವ ಅನಾಹುತ, ಬಿಸಿ ಪಾತ್ರೆಗಳಿಂದಾಗುವ ಅನಾಹುತ ತಡೆಯುವ ಕ್ರಮ:-**

- ಅನಿಲದ ಒಲೆಗಳನ್ನು ಹಚ್ಚುವಾಗ (ಸೀಮೆಎಣ್ಣೆ ಸ್ಟೌವ್ ಹಚ್ಚಬಾರದು) ಇತರೆ ಉರಿಯುವ ವಸ್ತುಗಳು ಇರಬಾರದು.
- ಅಡುಗೆ ಅನಿಲದ ಒಲೆಗಳನ್ನು ಹೆಚ್ಚುವಾಗ ಅಡುಗೆ ಮನೆ ಬಾಗಿಲು, ಕಿಟಕಿಗಳನ್ನು ತೆರೆದಿರಬೇಕು. ಬಿಸಿ ಪಾತ್ರೆಗಳನ್ನು ಇಳಿಸುವಾಗ ಸ್ಟೌವ್ ಅನ್ನು ಆಫ್ ಮಾಡಿ ಸ್ವಲ್ಪ ಹೊತ್ತಿನ ನಂತರ ಕೈಯಲ್ಲಿ ಬಟ್ಟೆ ಹಿಡಿದು ಕೆಳಗೆ ಇಳಿಸಬೇಕು.

- ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡರೆ ತಕ್ಷಣ ಸುಲಭವಾಗಿ ಕೊಠಡಿಯಲ್ಲಿ ಸಿಗುವ ಗೋಣಿಚೀಲ ಅಥವಾ ದಪ್ಪನೆಯ ಬೆಡ್ ಶೀಟನ್ನು ನೀರಿನಲ್ಲಿ ಅದ್ದಿ ಬೆಂಕಿಯ ಮೇಲೆ ಹಾಕಿ ನಂದಿಸಲು ಪ್ರಯತ್ನಿಸಬೇಕು.
- ಅಡುಗೆ ಮಾಡುವ ಸ್ಥಳದಲ್ಲಿ ಸದಾಕಾಲ, ಗೋಣಿಚೀಲ ಹಾಗೂ ಒಂದು ಡ್ರಮ್ ನೀರಿಟ್ಟುಕೊಂಡಿರಬೇಕು. ಬೆಂಕಿ ಆರಿಸುವ ಯಂತ್ರವನ್ನು ಅಡುಗೆ ಮನೆಯಲ್ಲಿ ಇಟ್ಟುಕೊಂಡಿರಬೇಕು ಹಾಗೂ ಇದರಿಂದ ಬೆಂಕಿ ಆರಿಸುವುದು ಸೂಕ್ತ.
- ಆಹಾರ ಸರಬರಾಜು ಮಾಡುವಾಗ ಬಿಸಿ ಪಾತ್ರೆಗಳು ಹಾಗೂ ಬಿಸಿ ಆಹಾರ ಮಕ್ಕಳಿಂದ ದೂರವಿರುವಂತೆ ಮುಂಜಾಗ್ರತೆ ವಹಿಸಬೇಕು. ಅನಿಲ ಸಿಲಿಂಡರ್‌ಗೆ ಅಳವಡಿಸಿರುವ ಅನಿಲ ಕೊಳವೆಯಿಂದ ಅನಿಲ ಸೋರಿಕೆ ಆಗದಂತೆ ಎಚ್ಚರ ವಹಿಸಬೇಕು.
- ಅಡುಗೆ ಮಾಡುವ ಸ್ಥಳದಲ್ಲಿ ಮಕ್ಕಳ ಪ್ರವೇಶ ಇರದಂತೆ ಎಚ್ಚರಿಕೆ ವಹಿಸಬೇಕು.
- ಅಡುಗೆ ಕೋಣೆ ತರಗತಿಯಿಂದ ಸಾಕಷ್ಟು ದೂರವಿರುವಂತೆ ಎಚ್ಚರಿಕೆ ವಹಿಸಬೇಕು.

3) ಆಹಾರ ಧಾನ್ಯ, ಸಿದ್ದಪಡಿಸಿದ ಆಹಾರವನ್ನು ಸುರಕ್ಷತೆ ಮಾಡುವುದು ಹೇಗೆ ?

- ಆಹಾರ ಧಾನ್ಯಗಳು, ತರಕಾರಿಗಳನ್ನು ಯಾವಾಗಲೂ ಮುಚ್ಚಿಟ್ಟಿರಬೇಕು.
- ಆಹಾರ ಧಾನ್ಯಗಳು, ತರಕಾರಿಗಳು ಮತ್ತು ತಯಾರಿಸಲ್ಪಟ್ಟ ಬಿಸಿ ಆಹಾರವನ್ನು ಕ್ರಿಮಿನಾಶಕ ಮತ್ತು ಇತರೆ ಔಷಧಿಯ ಸಾಮಗ್ರಿಗಳಿಂದ ದೂರವಿರುವಂತೆ ಎಚ್ಚರಿಕೆ ವಹಿಸಬೇಕು.
- ತಯಾರು ಮಾಡಿದ ಆಹಾರವನ್ನು ಸದಾಕಾಲ ಮುಚ್ಚಿರಬೇಕು.

**ಅಡುಗೆಯವರು ಆಹಾರವನ್ನು ಬಡಿಸುವಾಗ ಗಮನಿಸಬೇಕಾದ ಅಂಶಗಳು**

1. ದೈಹಿಕ ಶುಭ್ರತೆಗೆ ಗಮನ ಕೊಡಬೇಕು.
2. ಯಾವಾಗಲೂ ಶುಭ್ರವಾದ ಉಡುಪನ್ನು ಧರಿಸಬೇಕು.
3. ಹೊರಗಿನಿಂದ ಬಂದಾಗ ಧರಿಸಿದ ಉಡುಪನ್ನು ಬದಲಾಯಿಸಿ ಸ್ವಚ್ಛವಾದ ಸಮವಸ್ತ್ರವನ್ನು ಧರಿಸಿ ನಂತರ ಕೆಲಸದಲ್ಲಿ ನಿರತರಾಗಿರಬೇಕು.
4. ತಲೆ ಕೂದಲನ್ನು ಕೆದರಿಡದೆ ಸರಿಯಾಗಿ ಕಟ್ಟುವುದು, ಅಲ್ಲದೇ ಕೂದಲು ಮುಚ್ಚುವಂತಹ ಶುಭ್ರವಾದ ಬಟ್ಟೆಯಿಂದ ಕಟ್ಟಬೇಕು.
5. ಕೈ ಬೆರಳಿನ ಉಗುರುಗಳನ್ನು ಕತ್ತರಿಸಬೇಕು.
6. ಮಲ ಮೂತ್ರ ವಿಸರ್ಜನೆ ನಂತರ ಕೈಗಳನ್ನು ಕಡ್ಡಾಯವಾಗಿ ಸೋಪಿನಿಂದ ತೊಳೆಯಬೇಕು.
7. ಸೀನುವಾಗ ಕೆಮ್ಮುವಾಗ ಕರವಸ್ತ್ರವನ್ನು ಉಪಯೋಗಿಸಬೇಕು ಮತ್ತು ಕೈಗಳನ್ನು ಸ್ವಚ್ಛವಾಗಿ ತೊಳೆದು ಆಹಾರ ಪದಾರ್ಥಗಳನ್ನು ಮುಟ್ಟಬೇಕು.
8. ಕೈಬೆರಳುಗಳನ್ನು ಕಿವಿ, ಮೂಗು, ಬಾಯಿಯಲ್ಲಿ ಹಾಕಬಾರದು. ಹಾಕಿದರೆ ಸ್ವಚ್ಛವಾಗಿ ತೊಳೆದ ನಂತರ ಆಹಾರವನ್ನು ಬಡಿಸಬೇಕು.
9. ಯಾವುದೇ ವಿಧವಾದ ಗಾಯವಾದಲ್ಲಿ ಪಟ್ಟಿಯಿಂದ ಸರಿಯಾಗಿ ರಕ್ಷಿಸಲ್ಪಟ್ಟಿರಬೇಕು.
10. ಆಹಾರ ಪದಾರ್ಥಗಳನ್ನು ಕೈಯಿಂದ ಮುಟ್ಟಬಾರದು. ಸ್ವಚ್ಛವಾದ ಚಮಚ ಮತ್ತು ಸೌಟುಗಳನ್ನು ಉಪಯೋಗಿಸಬೇಕು.

11. ಸೋರುತ್ತಿರುವ ಗಾಯಗಳು ಕೈ ಅಥವಾ ಮುಂಗೈಯಲ್ಲಿ ಹುಣ್ಣು, ಕಿವಿಯಲ್ಲಿ ಸೋರುವುದು ಅಥವಾ ಆಗಾಗ್ಗೆ ಬೇಧಿ ವಾಂತಿಯಿಂದ ನರಳುತ್ತಿರುವ ವ್ಯಕ್ತಿಗಳು, ಆಹಾರ ಪದಾರ್ಥಗಳನ್ನು ಮುಟ್ಟುವುದು, ತಯಾರಿಸುವುದು ಅಥವಾ ವಿತರಣೆ ಮಾಡುವುದು ಇವುಗಳಲ್ಲಿ ತೊಡಗಬಾರದು.
12. ಆಹಾರವನ್ನು ತಯಾರು ಮಾಡುತ್ತಿರುವ ಕೈಗಳನ್ನು ನೆಕ್ಕುವುದು, ವಿತರಣೆ ಮಾಡುವ ಸೌಟಿನಿಂದ ರುಚಿ ನೋಡಬಾರದು.
13. ಕೈಗಳನ್ನು ಸಮವಸ್ತ್ರದಿಂದಾಗಲಿ, ಏಪ್ರಾನ್‌ನಿಂದಾಗಲಿ ಒರೆಸಬಾರದು. ಪ್ರತ್ಯೇಕ ವಸ್ತ್ರವನ್ನು ಉಪಯೋಗಿಸಬೇಕು.
14. ತಟ್ಟೆ ಲೋಟಗಳ ಒಳಭಾಗವನ್ನು ಕೈ ತಗಲುವಂತೆ ಮುಟ್ಟಬಾರದು. ಅಂಚಿನಲ್ಲಿ ಹಿಡಿಯಬೇಕು. ನೀರಿನ ಲೋಟಗಳಲ್ಲಿ ಕೈ ಬೆರಳನ್ನು ಅದ್ದಿ ವಿತರಣೆ ಮಾಡಬಾರದು.
15. ಚಾಕುವಿನಿಂದ ಆದ ಗಾಯ, ಇತರೆ ಹುಣ್ಣುಗಳನ್ನು ನೀರು ಹೀರದಿರುವ ಪಟ್ಟಿಯಿಂದ ಅಂಟಿಸಬೇಕು.
16. ಅಡುಗೆ ಕೆಲಸ ಮಾಡುವಾಗ ಓಡಾಡುವುದನ್ನು ಕಡಿಮೆ ಮಾಡಿ, ಸಂಭಾಷಣೆ ಮಿತಿ ಇರಲಿ.
17. ಆಹಾರ ವಿತರಣಾ ಸ್ಥಳವು ಅಡುಗೆ ಮನೆಗೆ ಸಮೀಪ ಇರಬೇಕು. ಹೆಚ್ಚು ದೂರ ಇದ್ದರೆ ಮಲಿನವಾಗುವ ಸಾಧ್ಯತೆ ಹೆಚ್ಚು.
18. ಅಡುಗೆ ಆದ ನಂತರ, ಕಸ ಕಡ್ಡಿ ಆಹಾರ ತುಣುಕು, ಬೇಡದ ವಸ್ತುಗಳನ್ನು ಮುಚ್ಚಳವಿರುವ ನೀರು ಹೀರದಂತಹ ಡಬ್ಬಗಳಲ್ಲಿ ಹಾಕಿ ವಿಲೇವಾರಿ ಮಾಡಬೇಕು.

- ಮಕ್ಕಳನ್ನು ಪ್ರೀತಿ–ಸೌಜನ್ಯದಿಂದ ಸಹಜ ರೀತಿಯಲ್ಲಿ ನಡೆಸಿಕೊಳ್ಳಬೇಕು.
- ಆಹಾರವನ್ನು ಬಡಿಸುವಾಗ ಒಳ್ಳೆಯ ಮಾತುಗಳಿಂದ ಅಕ್ಕರೆಯಿಂದ ಬಡಿಸಬೇಕು.
- ಆಹಾರವನ್ನು ಬಡಿಸುವಾಗ ಆ ಸ್ಥಳದಲ್ಲಿ ನಾಯಿ, ನೊಣ, ಕೋಳಿ, ಕಾಗೆ ಇತ್ಯಾದಿಗಳು ಬಾರದಂತೆ ವ್ಯವಸ್ಥೆ ಮಾಡಬೇಕು.
- ಮಕ್ಕಳು ಊಟಕ್ಕೆ ಕುಳಿತುಕೊಳ್ಳುವ ಸಮಯದಲ್ಲಿ ಸ್ಥಳದ ಸ್ವಚ್ಛತೆ ಕಡೆ ಗಮನ ಹರಿಸಬೇಕು.
- ಗೊತ್ತಿಲ್ಲದೆ ಆಕಸ್ಮಾತ್ ಆಹಾರದಲ್ಲಿ ಏನಾದರೂ ವ್ಯತ್ಯಾಸವಾಗಿ ಮಕ್ಕಳ ಆಹಾರ ಸೇವಿಸಿದ ನಂತರ ಅಸ್ವಸ್ಥರಾದಲ್ಲಿ ಕೂಡಲೇ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಬೇಕು.
  ಉದಾ: ಮಕ್ಕಳು ವಾಂತಿ/ಭೇದಿ ಮಾಡಿಕೊಂಡರೆ ಆಹಾರದಲ್ಲಿ ಅಥವಾ ಬೇರೆ ಕಾರಣದಿಂದ

ಸೋಂಕು ಉಂಟಾಗಿದ್ದ ಪಕ್ಷದಲ್ಲಿ ಪ್ರಥಮ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡುವುದು.

**ತಾಯಂದಿರು ಮೇಲ್ವಿಚಾರಣೆ ಮಾಡಬೇಕಾದ ಅಂಶಗಳು:–**

1. ಆಹಾರ ಸಾಮಗ್ರಿಗಳನ್ನು ಇಡುವ ಸ್ಥಳದಲ್ಲಿ ಕ್ರಮಬದ್ಧವಾಗಿಯೂ, ಸ್ವಚ್ಛವಾಗಿಯೂ ಶೇಖರಿಸುವುದನ್ನು ಗಮನಿಸುವುದು.
2. ಅಡುಗೆ ಕೋಣೆ ಕ್ರಮಬದ್ಧವಾಗಿ ಸ್ವಚ್ಛವಾಗಿ ಇಡಲು ಕ್ರಮ ತೆಗೆದುಕೊಳ್ಳಬೇಕು.
3. ಕುಡಿಯಲು, ಅಡುಗೆ ತಯಾರಿಸಲು, ಪಾತ್ರೆ ತೊಳೆಯಲು ಸ್ವಚ್ಛ ನೀರನ್ನು ಬಳಸಲು ತಿಳಿಸುವುದು.
4. ಅಡುಗೆಯವರು ಮತ್ತು ಸಹಾಯಕರು ನೈರ್ಮಲ್ಯ ಮತ್ತು ಶುಚಿಯಾದ ಅಡಿಗೆ ತಯಾರಿಸಿ ವಿತರಿಸಲು ತಿಳಿಸುವುದು.
5. ಅಡುಗೆ ತಯಾರಿಸುವ ಪಾತ್ರೆಗಳು ಅಡುಗೆಗೆ ಮುನ್ನ ಮತ್ತು ಅಡುಗೆ ಮಾಡಿದ ನಂತರ ಶುಚಿಯಾಗಿಟ್ಟುಕೊಂಡು ಉಪಯೋಗಿಸುವುದು.

6. ಆಹಾರ ಧಾನ್ಯಗಳನ್ನು ಶುಚಿಗೊಳಿಸಿದ ನಂತರ ಆಹಾರ ತಯಾರಿಸಲು ಮಾರ್ಗದರ್ಶನ ನೀಡುವುದು.
7. ತರಕಾರಿಗಳನ್ನು ಅಡುಗೆ ಮುನ್ನ ತೊಳೆದು ಉಪಯೋಗಿಸಲು ಸೂಚಿಸುವುದು.
8. ಅಯೋಡಿನ್‌ಯುಕ್ತ ಉಪ್ಪನ್ನು ಬಳಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
9. ಉತ್ತಮ ಗುಣಮಟ್ಟದ ಆಹಾರ ಸಾಮಗ್ರಿಗಳ ಬಳಕೆ ಬಗ್ಗೆ ಪರಿಶೀಲಿಸುವುದು.
10. ಯಾವುದೇ ಅಡೆತಡೆಯಿಲ್ಲದೆ ಮದ್ಯಾಹ್ನ ಉಪಹಾರ ವಿತರಿಸುವುದು.
11. ವಾರದಲ್ಲಿ ವಿವಿಧ ರೀತಿಯ ಆಹಾರ ತಯಾರಿಕೆ ಮಾಡಲು ಸೂಚಿಸುವುದು.
12. ನಿಯಮಿತವಾಗಿ ಆಹಾರ ತಯಾರಿಸಿದ್ದಾರೆಯೇ ಮತ್ತು ಮಕ್ಕಳಿಗೆ ವಿತರಿಸುವ ಮುನ್ನ ಶಿಕ್ಷಕರು ರುಚಿ ನೋಡಿ ನಂತರ ಬಡಿಸಿರುತ್ತಾರೆಯೇ ಎಂದು ಗಮನಿಸುವುದು ಹಾಗೂ ತಾಯಂದಿರು ರುಚಿ ನೋಡುವುದು.
13. ಮಕ್ಕಳು ಊಟ ಮಾಡುವ ಮುನ್ನ ಊಟದ ನಂತರ ಕೈ ತೊಳೆದಿರುತ್ತಾರೆಯೇ ಮತ್ತು ತಟ್ಟೆಗಳನ್ನು ಶುಚಿಗೊಳಿಸಿರುತ್ತಾರೆಯೇ ಎಂದು ಗಮನಿಸುವುದು.
14. ಮಕ್ಕಳು ನೀರು ಪೋಲು ಮಾಡದಂತೆ ಎಚ್ಚರವಹಿಸಿ ತಿಳಿ ಹೇಳುವುದು.
15. ಮಕ್ಕಳು ಉಗುರು ಕತ್ತರಿಸಿರುತ್ತಾರೆಯೇ ಎಂಬುದನ್ನು ಗಮನಿಸುವುದು.
16. ಮಕ್ಕಳು ಕ್ಯೂನಲ್ಲಿ ಕ್ರಮಬದ್ಧವಾಗಿ ಆಹಾರ ಪಡೆದು ಹಿಂತಿರುಗುವಚಿತೆ ನೋಡಿಕೊಳ್ಳುವುದು.
17. (ಭೇದ ಭಾವವಿಲ್ಲದೆ) ತಾರತಮ್ಯವಿಲ್ಲದೆ ಎಲ್ಲಾ ಮಕ್ಕಳು ಒಟ್ಟಿಗೆ ಊಟ ಮಾಡುತ್ತಿದ್ದಾರೆಯೇ ಎಂಬುದನ್ನು ಗಮನಿಸುವುದು.
18. ಆಹಾರ ಚೆಲ್ಲಾಪಿಲ್ಲಿ ಮಾಡಬಾರದು ಅಥವಾ ನಿರರ್ಥಕಗೊಳಿಸುವಂತೆ ತುಖುಸಚುುವಚುುದಯ,
19. ಮಗುವಿನ ಸಾಮಾನ್ಯ ಆರೋಗ್ಯ ಉತ್ತಮವಾಗಿದೆಯೇ ಎಂದು ಪರಿಶೀಲಿಸುವುದು, ಇಲ್ಲದಿದ್ದಲ್ಲಿ ಮುಖ್ಯ ಶಿಕ್ಷಕರು ಗಮನಕ್ಕೆ ತಂದು ವೈದ್ಯಕೀಯ ನೆರವು ಪಡೆಯಲು ಕ್ರಮ ತೆಗೆದುಕೊಳ್ಳುವುದು.
20. ಕ್ರಮಬದ್ಧವಾಗಿ ಮಾತ್ರೆಗಳನ್ನು ನೀಡುತ್ತಿದ್ದಾರೆಯೇ, ಹಾಗೂ ಈ ಬಗ್ಗೆ ದಾಖಲೆಗಳನ್ನು ನಿರ್ವಹಿಸುತ್ತಿರುತ್ತಾರೆಯೇ ಎಂಬ ಬಗ್ಗೆ ಪರಿಶೀಲಿಸುವುದು.
21. ಶಾಲೆಯ ವಾತಾವರಣ, ಸ್ವಚ್ಚತೆ ಉತ್ತಮವಾಗಿರಲು ಮುಖ್ಯ ಶಿಕ್ಷಕರಿಗೆ ನೆರವಾಗುವುದು.

# ಅಧ್ಯಾಯ–2
## (ಮಾನೋಗ್ರಾಫ್‌ನ ಸಂಕ್ಷಿಪ್ತ ಪರಿಚಯ)

**1. ಶೀರ್ಷಿಕೆಯ ಹೆಸರು:–**

ಶಿವಮೊಗ್ಗ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ **'ಅಕ್ಷರ ದಾಸೋಹ'** ಕಾರ್ಯಕ್ರಮ ನಿರ್ವಹಣೆ – ಒಂದು ಮಾನೋಗ್ರಾಫ್.

**2. ಪ್ರಸ್ತಾವನೆ:–**

**'ಆರೋಗ್ಯವೇ ಭಾಗ್ಯ'** ಎಂಬ ನಾಣ್ಣುಡಿಯಂತೆ ಮಗು/ವ್ಯಕ್ತಿಯ ಜೀವನದಲ್ಲಿ ಆರೋಗ್ಯದ ಪಾತ್ರ ಪ್ರಮುಖವಾಗಿ ಕಂಡುಬರುತ್ತದೆ. ತತ್ವಜ್ಞಾನಿ ಅರಿಸ್ಟಾಟಲ್‌ರವರ ಪ್ರಕಾರ **"ಸದೃಢ ದೇಹದಲ್ಲಿ ಸದೃಢ ಮನಸ್ಸು"** ಎಂಬ ತತ್ವ ಹೆಚ್ಚು ಅರ್ಥಪೂರ್ಣವಾಗಿದೆ.

ಮಕ್ಕಳ ವಿಷಯದಲ್ಲಿಯೂ ಆರೋಗ್ಯ ತುಂಬಾ ಮಹತ್ತರವಾಗಿದೆ. ಮಕ್ಕಳ ಆರೋಗ್ಯ ಎಂದಾಕ್ಷಣ ಅವರ ಬೆಳವಣಿಗೆ, ವಿಕಾಸ, ಆಟ, ಚಟುವಟಿಕೆಗಳು ಆಧಾರಾಂಶಗಳೆಲ್ಲವೂ ಪೂರಕವಾಗುತ್ತವೆ. ಈ ಎಲ್ಲಾ ಅಂಶಗಳು ಶಿಕ್ಷಣದ ಮೇಲೂ ಸಹ ಪ್ರಭಾವವನ್ನು ಬೀರುತ್ತವೆ. ಈ ದಿಸೆಯಲ್ಲಿ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಸರ್ವ ಶಿಕ್ಷಾ ಅಭಿಯಾನ ಜಾರಿಗೆ ಬಂದ ನಂತರ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನವಾಯಿತು. ಅಂತಹ ಕಾರ್ಯಕ್ರಮಗಳಲ್ಲಿ **'ಅಕ್ಷರ ದಾಸೋಹ'** ಕಾರ್ಯಕ್ರಮವೂ ಒಂದು ಪ್ರಮುಖವಾದದ್ದು.

ಮಕ್ಕಳು ಕಲಿಯುವ ಸಂದರ್ಭದಲ್ಲಿ ಪೌಷ್ಠಿಕ ಆಹಾರ ಸಕಾಲಕ್ಕೆ ದೊರೆತಾಗ ಸಂತಸದ ಕಲಿಕೆಯಾಗುತ್ತದೆ. ಇದರೊಂದಿಗೆ ಮಕ್ಕಳ ಆರೋಗ್ಯ ಉತ್ತಮ ಸ್ಥಿತಿಯಲ್ಲಿರುವುದರೊಂದಿಗೆ ಅವರ ಬೆಳವಣಿಗೆ ಮತ್ತು ವಿಕಾಸವಾಗಿ ಶಿಕ್ಷಣದ ಮೇಲೆ ಪ್ರಭಾವ ಬೀರುವುದು.

**3. ಪರಿಕಲ್ಪನೆ ಮತ್ತು ಅರ್ಥ:–**

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಕೇಂದ್ರ ಸರ್ಕಾರವು ಸರ್ವ ಶಿಕ್ಷಾ ಅಭಿಯಾನ ಜಾರಿಯ ನಂತರ ಪ್ರಾಥಮಿಕ ಶಾಲಾ ಮಕ್ಕಳಿಗೆ ಮದ್ಯಾಹ್ನದ ವೇಳೆಯಲ್ಲಿ ಶುಚಿ–ರುಚಿಯಾದ ಪೌಷ್ಠಿಕಾಂಶಯುಕ್ತ ಬಿಸಿ ಊಟವನ್ನು ನೀಡುವ ಯೋಜನೆ ಅಥವಾ ಕಾರ್ಯಕ್ರಮವೇ 'ಅಕ್ಷರ ದಾಸೋಹ'.

ಈ ಕಾರ್ಯಕ್ರಮವು ಪ್ರಾರಂಭದಲ್ಲಿ ಅಂದರೆ 2002–2008 ರಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಜಾರಿಗೊಂಡು ನಂತರ ಖಾಸಗಿ ಅನುದಾನಿತ ಶಾಲೆಗಳಿಗೂ ವಿಸ್ತರಿಸಲ್ಪಟ್ಟಿತು.

**4. ಕಾರ್ಯಕ್ರಮದ ಉದ್ದೇಶಗಳು:–**

- ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯನ್ನು ಉತ್ತಮಪಡಿಸುವುದು.
- ಶಾಲೆಯನ್ನು ಮಧ್ಯದಲ್ಲೇ ತೊರೆಯುವುದನ್ನು ತಪ್ಪಿಸುವುದು.
- ಪೌಷ್ಠಿಕತೆಯನ್ನು ಹೆಚ್ಚಿಸುವುದರ ಮೂಲಕ ಮಕ್ಕಳ ಆರೋಗ್ಯ ವೃದ್ಧಿಸುವುದು.
- ಕಲಿಕೆಯ ಮಟ್ಟವನ್ನು ಉತ್ತಮಪಡಿಸುವುದು.

5. **ಮಾನೋಗ್ರಾಫ್ ನ ಅಧ್ಯಯನದ ಅಗತ್ಯತೆ :-**

1) ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮದ ನಿರ್ವಹಣೆಯ ಸ್ಥಿತಿ-ಗತಿಯನ್ನರಿಯುವುದು.

2) ಮಕ್ಕಳ ಆರೋಗ್ಯ, ಬೆಳವಣಿಗೆ ಮತ್ತು ವಿಕಾಸದ ಮೇಲಿನ ಪ್ರಭಾವವನ್ನು ತಿಳಿಯುವುದು.

3) ಮಕ್ಕಳ ಶಿಕ್ಷಣದಲ್ಲಿ ಆಗಿರುವ ಪ್ರಯೋಜನಗಳನ್ನು ಗುರ್ತಿಸುವುದು.

6. **ವ್ಯಾಪ್ತಿ :-**

ಶಿವಮೊಗ್ಗ ಜಿಲ್ಲೆಯ 7 ಬ್ಲಾಕ್‌ಗಳ ಅಕ್ಷರ ದಾಸೋಹ ಕೇಂದ್ರಗಳು ಮತ್ತು ಈ ಬ್ಲಾಕ್‌ಗಳಲ್ಲಿ ಆಯ್ದ ಪ್ರಾಥಮಿಕ ಶಾಲೆಗಳು ಇಲ್ಲಿಯ ನಿರ್ವಹಣೆಯ ಉಸ್ತುವಾರಿ ಅಧಿಕಾರಿಗಳನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಿ ವರದಿ ಮಾಡಿದೆ.

7. **ಮಾನೋಗ್ರಾಫ್‌ನ ಉದ್ದೇಶಗಳು:-**

- ಜಿಲ್ಲಾ ಹಂತದಲ್ಲಿ ಅಕ್ಷರ ದಾಸೋಹದ ಕಾರ್ಯನಿರ್ವಹಣೆಯ ರೂಪುರೇಷೆಗಳ ಸ್ಥೂಲ ಪರಿಚಯ ಕಂಡುಕೊಳ್ಳುವುದು.
- ಜಿಲ್ಲಾ ಹಂತದಿಂದ ಬ್ಲಾಕ್ ಹಂತಗಳ ಮೂಲಕ ಶಾಲೆಗಳಿಗೆ ಆಹಾರ ದಾಸ್ತಾನು ಸರಬರಾಜು ವ್ಯವಸ್ಥೆಯನ್ನು ತಿಳಿಯುವುದು.
- ಶಾಲೆಗಳಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ ನಿರ್ವಹಣೆಯ ಕ್ರಮವನ್ನು ಅರಿಯುವುದು.
- ಮಕ್ಕಳ ಆರೋಗ್ಯ, ಪೌಷ್ಟಿಕತೆ, ಕಲಿಕೆ, ಹಾಜರಾತಿಯ ಮೇಲೆ ಅಕ್ಷರ ದಾಸೋಹ ಕಾರ್ಯಕ್ರಮದ ಪ್ರಭಾವವನ್ನು ವಿಶ್ಲೇಷಿಸುವುದು.
- ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದಡಿ ಈ ಕಾರ್ಯಕ್ರಮ ಜಿಲ್ಲೆಯ ಮಕ್ಕಳ ದಾಖಲಾತಿ, ಹಾಜರಾತಿ ಮತ್ತು ಕಲಿಕೆಯ ಪರಿಣಾಮವನ್ನು, ಮಟ್ಟವನ್ನು ಗುರುತಿಸುವುದರೊಂದಿಗೆ ಸ್ಥೂಲಚಿತ್ರಣವನ್ನು ನೀಡುವುದು.

8. **ಪ್ರಾಕಲ್ಪನೆ :**

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಮಕ್ಕಳ ಸಾರ್ವತ್ರಿಕ ದಾಖಲಾತಿ, ಹಾಜರಾತಿ, ಕಲಿಕೆ ಮತ್ತು ಆರೋಗ್ಯ ವೃದ್ಧಿಯ ಮೇಲೆ ಅಕ್ಷರ ದಾಸೋಹ ಕಾರ್ಯಕ್ರಮದ ಸೂಕ್ತ ನಿರ್ವಹಣೆ ಪ್ರಮುಖ ಪ್ರಭಾವೀ ಕಾರ್ಯಕ್ರಮವಾಗುವುದು.

9. **ಯೋಜನಾ ವಿವರ**

**ಅ) ಪ್ರತಿದರ್ಶನ (Sample) :-**

ಜಿಲ್ಲೆಯ ಅಕ್ಷರ ದಾಸೋಹ ಕೇಂದ್ರವೂ ಸೇರಿದಂತೆ 7 ಬ್ಲಾಕ್‌ಗಳಿಗೆ ಮತ್ತು ಆಯ್ದ ಪ್ರಾಥಮಿಕ ಶಾಲೆಗಳಿಗೆ ಭೇಟಿ ನೀಡಿ ಅಕ್ಷರ ದಾಸೋಹ ಕಾರ್ಯಕ್ರಮ ನಿರ್ವಹಣೆಯ ಚಿತ್ರಣವನ್ನು ಸೆರೆಹಿಡಿದು, ಮಾಹಿತಿ ಸಂಗ್ರಹಿಸಿ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಯಶಸ್ಸಿಗೆ ಎಷ್ಟರಮಟ್ಟಿಗೆ ಪೂರಕವಾಗಿದೆ ಎಂಬುದರ ಬಗ್ಗೆ ಬೆಳಕು ಚೆಲ್ಲುವುದಾಗಿದೆ.

೮) ಸಾಧನ / ತಂತ್ರಗಳು :-

| ಸಾಧನಗಳು | ತಂತ್ರಗಳು |
|---|---|
| ಅವಲೋಕನ | ವಿವಿಧ ಹಂತದಲ್ಲಿ ನಿರ್ವಹಣೆಯ ಅವಲೋಕನ |
| ಪ್ರಶ್ನಾವಳಿಗಳು | ಮುದ್ರಿತ ಪ್ರಶ್ನಾವಳಿಗಳ ಮೂಲಕ ಜಿಲ್ಲಾ ಹಂತದಿಂದ ಪ್ರಾರಂಭಿಸಿ ವಿವಿಧ ಸ್ತರದ ಉಸ್ತುವಾರಿ ಅಧಿಕಾರಿಗಳಿಂದ ಮಾಹಿತಿ ಸಂಗ್ರಹ |
| ಭೇಟಿ / ಸಂವಾದ | ವಿವಿಧ ಸ್ತರದಲ್ಲಿನ ಉಸ್ತುವಾರಿ ಕಾರ್ಯಕ್ರಮ ನಿರ್ವಾಹಕರನ್ನು ಭೇಟಿ ಮಾಡಿ ನಿರ್ವಹಣಾ ವ್ಯವಸ್ಥೆಯನ್ನು ದಾಖಲಿಸುವಿಕೆ. |
| ಸಂದರ್ಶನ | ಆಯಾ ಬ್ಲಾಕ್‌ಗಳ ಆಯ್ದ 7–8 ಶಾಲೆಗಳಿಗೆ ಹೋಗಿ ಕಲಿಯುವ ಮಕ್ಕಳನ್ನು ಸಂದರ್ಶಿಸಿ ಅಕ್ಷರ ದಾಸೋಹ ನಿರ್ವಹಣೆ ಅದರ ಪ್ರಯೋಜನಗಳನ್ನು ಪಟ್ಟಿ ಮಾಡುವುದು. |
| ದಾಖಲೀಕರಣ | ಶಾಲಾ ಹಂತದಲ್ಲಿ ಮಕ್ಕಳು ಸೇವಿಸುವ ಬಿಸಿಯೂಟ ಕ್ರಮ ಮತ್ತು ಕಲಿಕೆ ಹಾಜರಾತಿಯ ಮೇಲಿನ ಪರಿಣಾಮವನ್ನು ದಾಖಲೀಕರಿಸುವುದು. |

# ಅಧ್ಯಾಯ – 3

## ಜಿಲ್ಲೆಯ ಅಕ್ಷರ ದಾಸೋಹ ಕಾರ್ಯಕ್ರಮದ ಮಾಹಿತಿ

### ➢ ಮಕ್ಕಳ ದಾಖಲಾತಿ, ಹಾಜರಾತಿ, ಫಲಾನುಭವಿಗಳ ಕ್ರೋಢೀಕೃತ ತಃಖ್ತೆ:-

- ಜಿಲ್ಲೆಯ ಶಾಲೆಗಳ, ಅಡುಗೆ ಕೇಂದ್ರಗಳ, ಅಡುಗೆಯವರ ಮಾಹಿತಿ.
- ಅಕ್ಷರ ದಾಸೋಹ ಶೇಖರಣ ಕೊಠಡಿಗಳ, ಅಡುಗೆ ಕೋಣೆಗಳ ವಿವರ.
- ಅಕ್ಷರ ದಾಸೋಹ ಶೇಖರಣ ಕೊಠಡಿಗಳ, ಅಡುಗೆ ಕೋಣೆಗಳ ಅನುದಾನದ ವಿವರ
- ಹೆಚ್ಚುವರಿ ಅನುದಾನಿತ ಶಾಲೆಗಳ ಅಡುಗೆ ಕೇಂದ್ರಗಳ ಪ್ರಸ್ತಾವನೆ.
- ಸ್ವಯಂ ಸೇವಾ ಸಂಸ್ಥೆಗಳ ವಿವರ
- ಅಗ್ನಿಶಾಮಕ ಸಾಧನಗಳ ಮಾಹಿತಿ.
- ಬಿಸಿಯೂಟ ಸೇವಿಸಿ ಅಸ್ವಸ್ಥರಾದ ಮಕ್ಕಳ ಶಾಲಾ ವಿವರ
- ಆಹಾರ ಧಾನ್ಯ ಎತ್ತುವಳಿ ಮಾಹಿತಿ.
- ಅಡುಗೆ ಅನಿಲ ಮಾಸಿಕ ಸರಬರಾಜು ಮಾಹಿತಿ.

ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ್,ಶಿವಮೊಗ್ಗ

ಅಕ್ಷರ ದಾಸೋಹ ಕಾರ್ಯಕ್ರಮ

**ದಾಖಲಾತಿ/ಹಾಜರಾತಿ/ಫಲಾನುಭವಿಗಳ ಕ್ರೋಢೀಕೃತ ತಖ್ತೆ: ಸರ್ಕಾರಿ ಶಾಲೆಗಳು**

| ಕ್ರ. ಸಂ. | ಜಿಲ್ಲೆಯ ಹೆಸರು | ದಾಖಲಾತಿ | | | | ಹಾಜರಾತಿ | | | | ಬಿಸಿ ಊಟ ಮಾಡುವವರು | | | | ಬಿಸಿ ಊಟ ಮಾಡದೆ ಇರುವವರು | | | |
|---|---|---|---|---|---|---|---|---|---|---|---|---|---|---|---|---|---|
| | | 1 ರಿಂದ 5 | 6 ರಿಂದ 7 | 8ನೇ ತರಗತಿ | 9 ರಿಂದ 10 | 1 ರಿಂದ 5 | 6 ರಿಂದ 7 | 8ನೇ ತರಗತಿ | 9 ರಿಂದ 10 | 1 ರಿಂದ 5 | 6 ರಿಂದ 7 | 8ನೇ ತರಗತಿ | 9 ರಿಂದ 10 | 1 ರಿಂದ 5 | 6 ರಿಂದ 7 | 8ನೇ ತರಗತಿ | 9 ರಿಂದ 10 |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
| 01 | ಶಿವಮೊಗ್ಗ | 93310 | 44478 | 13436 | 28889 | 92721 | 44280 | 13314 | 28812 | 88212 | 42020 | 12445 | 27643 | 4509 | 2260 | 869 | 1169 |

ಘೋಷ್ವಾರೆ

| | |
|---|---|
| ದಾಖಲಾತಿ | 180113 |
| ಹಾಜರಾತಿ | 179127 |
| ಫಲಾನುಭವಿಗಳು | 170320 |
| ಹಾಜರಾಗಿ ಊಟ ಮಾಡದಿರುವ ಮಕ್ಕಳ ಸಂಖ್ಯೆ | 8807 |

# ಜಿಲ್ಲಾ ಪಂಚಾಯತ್ ಶಿವಮೊಗ್ಗ

## ಅಕ್ಷರ ದಾಸೋಹ ಕಾರ್ಯಕ್ರಮ

### ದಾಖಲಾತಿ/ಹಾಜರಾತಿ/ಫಲಾನುಭವಿಗಳ ಸಂಖ್ಯೆ : **ಅನುದಾನಿತ**

ಜಿಲ್ಲೆಯ ಹೆಸರು : ಶಿವಮೊಗ್ಗ

| ಕ್ರ. ಸಂ. | ಜಿಲ್ಲೆಯ ಹೆಸರು | ದಾಖಲಾತಿ | | | | ಹಾಜರಾತಿ | | | | ಬಿಸಿ ಊಟ ಮಾಡುವವರು | | | | ಬಿಸಿ ಊಟ ಮಾಡದೆ ಇರುವವರು | | | |
|---|---|---|---|---|---|---|---|---|---|---|---|---|---|---|---|---|---|
| | | 1 ರಿಂದ 5 | 6 ರಿಂದ 7 | 8ನೇ ತರಗತಿ | 9 ರಿಂದ 10 | 1 ರಿಂದ 5 | 6 ರಿಂದ 7 | 8ನೇ ತರಗತಿ | 9 ರಿಂದ 10 | 1 ರಿಂದ 5 | 6 ರಿಂದ 7 | 8ನೇ ತರಗತಿ | 9 ರಿಂದ 10 | 1 ರಿಂದ 5 | 6 ರಿಂದ 7 | 8ನೇ ತರಗತಿ | 9 ರಿಂದ 10 |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
| 01 | ಶಿವಮೊಗ್ಗ | 10616 | 5218 | 7887 | 15876 | 10585 | 5131 | 7825 | 15806 | 9485 | 4362 | 7715 | 15348 | 1100 | 769 | 110 | 458 |

**ಘೋಷ್ವಾರೆ**

| | |
|---|---|
| ದಾಖಲಾತಿ | 39597 |
| ಹಾಜರಾತಿ | 39347 |
| ಫಲಾನುಭವಿಗಳು | 36910 |
| ಹಾಜರಾಗಿ ಊಟ ಮಾಡದಿರುವ ಮಕ್ಕಳ ಸಂಖ್ಯೆ | 2437 |

# ಜಿಲ್ಲಾ ಪಂಚಾಯತ್,ಶಿವಮೊಗ್ಗ

## ಅಕ್ಷರ ದಾಸೋಹ ಕಾರ್ಯಕ್ರಮ

### ನಮೂನೆ 1 ಪ್ರಾಥಮಿಕ

| ಕ್ರ.ಸಂ | ಜಿಲ್ಲೆ | ಶಾಲೆಗಳ ಸಂಖ್ಯೆ | ಜಿಲ್ಲೆಗೆ ಮಂಜೂರಾದ ಕೇಂದ್ರಗಳ ಸಂಖ್ಯೆ | ಮಂಜೂರಾದ ಕೇಂದ್ರಗಳ ಪೈಕಿ ಎನ್.ಜಿ.ಓ.ಗಳಿಗೆ ವಹಿಸಿರುವ ಕೇಂದ್ರಗಳ ಸಂಖ್ಯೆ | ಕೆಲಸ ನಿರ್ವಹಿಸುತ್ತಿರುವ ಕೇಂದ್ರಗಳ ಸಂಖ್ಯೆ | ಇತರೆ ಕಾರಣಗಳಿಂದ ಮುಚ್ಚಿರುವ ಕೇಂದ್ರಗಳ ಸಂಖ್ಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಶಿವಮೊಗ್ಗ | 1924 | 1907 | – | 1907 | – |

### ನಮೂನೆ 2 ಪ್ರೌಢ

| ಕ್ರ.ಸಂ | ಜಿಲ್ಲೆ | ಶಾಲೆಗಳ ಸಂಖ್ಯೆ | ಜಿಲ್ಲೆಗೆ ಮಂಜೂರಾದ ಕೇಂದ್ರಗಳ ಸಂಖ್ಯೆ | ಮಂಜೂರಾದ ಕೇಂದ್ರಗಳ ಪೈಕಿ ಎನ್.ಜಿ.ಓ.ಗಳಿಗೆ ವಹಿಸಿರುವ ಕೇಂದ್ರಗಳ ಸಂಖ್ಯೆ | ಕೆಲಸ ನಿರ್ವಹಿಸುತ್ತಿರುವ ಕೇಂದ್ರಗಳ ಸಂಖ್ಯೆ | ಇತರೆ ಕಾರಣಗಳಿಂದ ಮುಚ್ಚಿರುವ ಕೇಂದ್ರಗಳ ಸಂಖ್ಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಶಿವಮೊಗ್ಗ | 149 | 117 | – | 117 | – |

### ನಮೂನೆ-3

| ಕ್ರ.ಸಂ | ಜಿಲ್ಲೆ | ಜಿಲ್ಲೆಗೆ ಮಂಜೂರಾದ ಕೇಂದ್ರಗಳ ಸಂಖ್ಯೆ | | ಮಾದರಿವಾರು ಕೇಂದ್ರಗಳ ಸಂಖ್ಯೆ **ಪ್ರಾಥಮಿಕ** | | | | ಮಾದರಿವಾರು ಕೇಂದ್ರಗಳ ಸಂಖ್ಯೆ **ಪ್ರೌಢ** | | | |
|---|---|---|---|---|---|---|---|---|---|---|---|
| | | ಪ್ರಾಥಮಿಕ | ಪ್ರೌಢ | ಎ1 | ಎ | ಬಿ | ಸಿ | ಎ1 | ಎ | ಬಿ | ಸಿ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಶಿವಮೊಗ್ಗ | 1907 | 117 | 498 | 672 | 721 | 16 | 69 | 38 | 7 | 3 |

### ನಮೂನೆ 4 ಪ್ರಾಥಮಿಕ

| ಕ್ರ.ಸಂ | ಜಿಲ್ಲೆ | ಪ್ರಾಥಮಿಕ | ಮುಖ್ಯ ಅಡುಗೆಯವರು | ಅಡುಗೆಯವರು | ಸಹಾಯಕ ಅಡುಗೆಯವರು | ಸಹಾಯಕರು | ಒಟ್ಟು ಮುಖ್ಯ ಅಡುಗೆಯವರು | ಒಟ್ಟು ಸಹಾಯಕರು |
|---|---|---|---|---|---|---|---|---|
| 1 | ಶಿವಮೊಗ್ಗ | ಪ್ರಾಥಮಿಕ | 1907 | 1409 | 16 | 737 | 1907 | 2162. |

### ನಮೂನೆ 5 ಪ್ರೌಢ

| ಕ್ರ.ಸಂ | ಜಿಲ್ಲೆ | ಪ್ರಾಥಮಿಕ | ಮುಖ್ಯ ಅಡುಗೆಯವರು | ಅಡುಗೆಯವರು |
|---|---|---|---|---|
| 1 | ಶಿವಮೊಗ್ಗ | ಪ್ರಾಥಮಿಕ | 117 | 222 |

### ನಮೂನೆ 6 ಅಡುಗೆ ಕೇಂದ್ರಗಳ ವಿವರ ಪ್ರಾಥಮಿಕ

| ಕ್ರ.ಸಂ | ಜಿಲ್ಲೆ | ಶಾಲೆಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಅಡುಗೆ ಕೇಂದ್ರಗಳ ಸಂಖ್ಯೆ | ಒಟ್ಟು ಕೇಂದ್ರಗಳು |
|---|---|---|---|---|
| 1 | ಶಿವಮೊಗ್ಗ | 1924 | 1907 | 1907 |

### .ನಮೂನೆ 7 ಅಡುಗೆ ಕೇಂದ್ರಗಳ ವಿವರ ಪ್ರೌಢ

| ಕ್ರ.ಸಂ | ಜಿಲ್ಲೆ | ಶಾಲೆಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಅಡುಗೆ ಕೇಂದ್ರಗಳ ಸಂಖ್ಯೆ | ಒಟ್ಟು ಕೇಂದ್ರಗಳು |
|---|---|---|---|---|
| 1 | ಶಿವಮೊಗ್ಗ | 149 | 117 | 117 |

### ನಮೂನೆ-8 ಜಾತಿವಾರು ಅಡುಗೆ ಸಿಬ್ಬಂಧಿ ವಿವರ- ಪ್ರಾಥಮಿಕ

| ಕ್ರ.ಸಂ | ಜಿಲ್ಲೆ | ಅಡುಗೆ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಜಾತಿವಾರು ವಿವರ | | | | |
|---|---|---|---|---|---|---|
| | | ಪ.ಜಾತಿ | ಪ.ವರ್ಗ | ಅಲ್ಪ ಸಂಖ್ಯಾತರು | ಇತರೆ | ಒಟ್ಟು |
| 1 | ಶಿವಮೊಗ್ಗ | 762 | 272 | 655 | 2380 | 4069 |

### .ನಮೂನೆ-9 ಜಾತಿವಾರು ಅಡುಗೆ ಸಿಬ್ಬಂಧಿ ವಿವರ- ಪ್ರೌಢ

| ಕ್ರ.ಸಂ | ಜಿಲ್ಲೆ | ಅಡುಗೆ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಜಾತಿವಾರು ವಿವರ | | | | |
|---|---|---|---|---|---|---|
| | | ಪ.ಜಾತಿ | ಪ.ವರ್ಗ | ಅಲ್ಪ ಸಂಖ್ಯಾತರು | ಇತರೆ | ಒಟ್ಟು |
| 1 | ಶಿವಮೊಗ್ಗ | 71 | 41 | 91 | 136 | 339 |

ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ್,ಶಿವಮೊಗ್ಗ

ಅಕ್ಷರ ದಾಸೋಹ ಕಾರ್ಯಕ್ರಮ

2008–09 ನೇ ಸಾಲಿನಲ್ಲಿ ಮಂಜೂರು ಮಾಡಲಾದ ಶೇಖರಣಾ ಕೊಠಡಿಗಳ ತಾಲ್ಲೂಕುವಾರು ವಿವರ.

| ಕ್ರ.ಸಂ | ತಾಲ್ಲೂಕು | ಮಂಜೂರಾಗಿರುವುದು | | | ಪೂರ್ಣಗೊಂಡಿರುವುದು | | | ಆರ್.ಸಿ.ಸಿ. ಹಂತದಲ್ಲಿರುವುದು | | | ಪ್ರಾರಂಬಿಸದೆ ಇರುವುದು | | |
|---|---|---|---|---|---|---|---|---|---|---|---|---|---|
| | | ಪ್ರಾಥಮಿಕ | ಪ್ರೌಢ | ಒಟ್ಟು | ಪ್ರಾಥಮಿಕ | ಪ್ರೌಢ | ಒಟ್ಟು | ಪ್ರಾಥಮಿಕ | ಪ್ರೌಢ | ಒಟ್ಟು | ಪ್ರಾಥಮಿಕ | ಪ್ರೌಢ | ಒಟ್ಟು |
| 1 | ಭದ್ರಾವತಿ | 205 | 17 | 222 | 203 | 17 | 220 | 2 | – | 2 | – | – | – |
| –2– | ಹೊಸನಗರ | 189 | 18 | 207 | 188 | 18 | 206 | 1 | – | 1 | – | – | – |
| 3 | ಸಾಗರ | 274 | 15 | 289 | 274 | 15 | 289 | – | – | – | – | – | – |
| 4 | ಶಿಕಾರಿಪುರ | 184 | 15 | 199 | 183 | 15 | 198 | 1 | – | 1 | – | – | – |
| 5 | ಶಿವಮೊಗ್ಗ | 272 | 21 | 293 | 271 | 21 | 292 | 1 | – | 1 | – | – | – |
| 6 | ಸೊರಬ | 266 | 13 | 279 | 266 | 13 | 279 | – | – | – | – | – | – |
| 7 | ತೀರ್ಥಹಳ್ಳಿ | 205 | 18 | 223 | 204 | 17 | 219 | 1 | 1 | 2 | – | – | – |
| | ಒಟ್ಟು | **1595** | **117** | **1712** | **1589** | **116** | **1622** | **6** | **1** | **7** | – | – | – |

ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ್,ಶಿವಮೊಗ್ಗ

ಅಕ್ಷರ ದಾಸೋಹ ಕಾರ್ಯಕ್ರಮ

2007-08 ನೇ ಸಾಲಿನ ಅಡುಗೆ ಕೋಣೆಗಳ ಪ್ರಗತಿ ವರದಿ

| ಕ್ರ.ಸಂ | ಜಿಲ್ಲೆಯ ಹೆಸರು | ಬಿಡುಗಡೆಯಾಗಿರುವ ಅನುದಾನ | ಜಿಲ್ಲೆಗೆ ಮಂಜೂರಾಗಿರುವ ಅಡುಗೆ ಕೋಣೆಗಳ ಸಂಖ್ಯೆ | ಪೂರ್ಣಗೊಂಡಿರುವ ಕೋಣೆಗಳ ಸಂಖ್ಯೆ | ಪ್ರಾರಂಬಿಸಿ ವಿವಿದ ಹಂತದಲ್ಲಿರುವ ಅಡುಗೆ ಕೋಣೆಗಳ ಸಂಖ್ಯೆ | | ಪ್ರಾರಂಬಿಸದಿರುವ ಕೋಣೆಗಳ ಸಂಖ್ಯೆ | ಪೂರ್ಣಗೊಂಡಿರುವ ಅಡುಗೆ ಕೋಣೆಗಳು ಶೇಕಡವಾರು |
|---|---|---|---|---|---|---|---|---|
| | | | | | ಪಾಯ | ಛಾವಣಿ | | |
| 1 | 2 | 3 | 4 | 5 | 6 | 7 | 8 | 9 |
| 1 | ಶಿವಮೊಗ್ಗ | 194.40 | 324 | 323 | – | – | 01 | 99.69% ತೀರ್ಥಹಳ್ಳಿ ತಾಲ್ಲೂಕಿನ ಬೇಗುವಳ್ಳಿ ಶಾಲೆಯ ಮುಖ್ಯ ಶಿಕ್ಷಕರು ಹಣ ದುರುಪಯೋಗ ಮಾಡಿರುವುದರಿಂದ ಒಂದು ಬಾಕಿ ಇದೆ. |

ಕರ್ನಾಟಕ ಸರ್ಕಾರ

## ಜಿಲ್ಲಾ ಪಂಚಾಯತ್, ಶಿವಮೊಗ್ಗ

ಅಕ್ಷರ ದಾಸೋಹ ಕಾರ್ಯಕ್ರಮ

1. ಅಡುಗೆ ಕೇಂದ್ರಗಳು ಹಾಗೂ ಅಡುಗೆ ಕೋಣೆಗಳ ವಿವರ:

| ಕ್ರ.ಸಂ | ಅಡುಗೆ ಕೇಂದ್ರಗಳ ಸಂಖ್ಯೆ | | | | ನಿರ್ಮಾಣ ಮಾಡಲಾದ ಅಡುಗೆ ಕೋಣೆ ಸಹಿತ ದಾಸ್ತಾನು ಕೋಣೆಗಳ ವಿವರ | | | | | | ಒಟ್ಟು |
|---|---|---|---|---|---|---|---|---|---|---|---|
| | | | | | 2007–08 | | | 2008–09 | | | |
| | | ಪ್ರಾಥಮಿಕ | ಪ್ರೌಢ | ಒಟ್ಟು | ಪ್ರಾಥಮಿಕ | ಪ್ರೌಢ | ಒಟ್ಟು | ಪ್ರಾಥಮಿಕ | ಪ್ರೌಢ | ಒಟ್ಟು | |
| 1 | ಸರ್ಕಾರಿ ಶಿಕ್ಷಣ ಇಲಾಖೆ | 1907 | 117 | 2024 | 312 | - | 312 | 1595 | 117 | 1712 | 2024 |
| 2 | ಅನುದಾನಿತ ಶಿಕ್ಷಣಇಲಾಖೆ | 63 | 139 | 202 | - | - | - | - | - | - | - |
| 3 | ಮದರಸ | 03 | - | 03 | - | - | - | - | - | - | - |
| 4 | ಇ.ಜಿ..ಎಸ್ ಕೇಂದ್ರಗಳು | 02 | - | 02 | - | - | - | | - | - | - |
| 5 | ಎನ್.ಸಿ.ಎಲ್.ಎಫ್ ಲೇಬರ್ ಇಲಾಖೆ | 02 | - | 02 | - | - | - | - | - | - | - |
| 6 | ಮುರಾರ್ಜಿ ದೇಸಾಯಿ ವಸತಿ ಶಾಲೆಗಳು | - | 14 | 14 | - | - | - | - | - | - | - |
| 7 | ಕಿತ್ತೂರು ಚನ್ನಮ್ಮ ವಸತಿ ಶಾಲೆಗಳು | - | 02 | 02 | - | - | - | - | - | - | - |
| 8 | ಜೆ.ಟಿ.ಎಸ್. ತಾಂತ್ರಿಕ ಇಲಾಖೆ | - | 01 | 01 | - | - | - | - | - | - | - |
| 9 | ಆಶ್ರಮ ಶಾಲೆಗಳು | 07 | - | 07 | - | - | - | - | - | - | - |
| | ಒಟ್ಟು | 1984 | 273 | 2257 | 312 | | 312 | 1595 | 117 | 1712 | 2024 |

2. ಫಲಾನುಭವಿಗಳವಿವರ

| ಕ್ರ.ಸಂ | ತರಗತಿ | 1-5 | 6-7 | 8 | 9-10 | ಒಟ್ಟು |
|---|---|---|---|---|---|---|
| 1 | ಸರ್ಕಾರಿ | 88212 | 42020 | 12445 | 27643 | 170320 |
| 2 | ಅನುದಾನಿತ | 9485 | 4362 | 7715 | 15348 | 36910 |
| | ಒಟ್ಟು | 97697 | 46382 | 20160 | 42991 | 207230 |

**ಅಜೆಂಡ:19**

ಕರ್ನಾಟಕ ಸರ್ಕಾರ

## ಜಿಲ್ಲಾ ಪಂಚಾಯತ್,ಶಿವಮೊಗ್ಗ

ಅಕ್ಷರ ದಾಸೋಹ ಕಾರ್ಯಕ್ರಮ

ದಿನಾಂಕ:07-01-2011 ರಂದು ಸಹ ನಿರ್ದೇಶಕರು ಮ.ಉ.ಯೋ.ಬೆಂಗಳೂರು ಇವರ ಕಛೇರಿಯಲ್ಲಿ ನಡೆಯುವ ಸಭೆಗೆ ಮಾಹಿತಿ

**ಹೆಚ್ಚುವರಿ ಅನುದಾನಿತ ಅಡುಗೆ ಕೇಂದ್ರಗಳ ಪ್ರಸ್ತಾವನೆ(ಎಂ-3)**

| ಕ್ರ.ಸಂ | ಅನುದಾನಿತ ಶಾಲೆಗಳು | | | ಈಗಾಗಲೇ ಸ್ವಯಂ ಸೇವಾ ಸಂಸ್ಥೆಗಳಿಂದ ಬಿಸಿಯೂಟ ಸರಬರಾಜು ಮಾಡುತ್ತಿರುವ ಶಾಲೆಗಳ ಸಂಖ್ಯೆ | | | ಅಗತ್ಯವಿರುವ ಅಡುಗೆ ಕೇಂದ್ರಗಳು | | | ಈ ಕೇಂದ್ರಗಳಿಗೆ ಅಗತ್ಯವಿರುವ ಅಡುಗೆ ಕೇಂದ್ರಗಳ ಸಂಖ್ಯೆ | | |
|---|---|---|---|---|---|---|---|---|---|---|---|---|
| | ಪ್ರಾಥಮಿಕ | ಪ್ರೌಢ | ಒಟ್ಟು | ಪ್ರಾಥಮಿಕ | ಪ್ರೌಢ | ಒಟ್ಟು | ಪ್ರಾಥಮಿಕ | ಪ್ರೌಢ | ಒಟ್ಟು | ಪ್ರಾಥಮಿಕ | ಪ್ರೌಢ | ಒಟ್ಟು |
| ಶಿವಮೊಗ್ಗ | 29 | 43 | 72 | 27 | 43 | 70 | - | - | - | - | - | - |
| ಭದ್ರಾವತಿ | 17 | 25 | 42 | 17 | 25 | 42 | - | - | - | - | - | - |
| ಸಾಗರ | 06 | 13 | 19 | 06 | 13 | 19 | - | - | - | - | - | - |
| ಶಿಕಾರಿಪುರ | 08 | 24 | 32 | 08 | 24 | 32 | - | - | - | - | - | - |
| ಸೊರಬ | 04 | 17 | 21 | 04 | 17 | 21 | - | - | - | - | - | - |
| ಹೊಸನಗರ | 02 | 05 | 06 | 02 | 05 | 06 | - | - | - | - | - | - |
| ತೀರ್ಥಹಳ್ಳಿ | 02 | 04 | 06 | 02 | 04 | 06 | - | - | - | - | - | - |
| ಒಟ್ಟು | **68** | **131** | **199** | **66** | **131** | **197** | - | - | - | - | - | - |

ಶಿಕ್ಷಣಾಧಿಕಾರಿಗಳು
ಅಕ್ಷರ ದಾಸೋಹ ಕಾರ್ಯಕ್ರಮ
ಜಿಲ್ಲಾ ಪಂಚಾಯತ್,ಶಿವಮೊಗ್ಗ

# ಜಿಲ್ಲಾ ಪಂಚಾಯತ್,ಶಿವಮೊಗ್ಗ

## ಅಕ್ಷರ ದಾಸೋಹ ಕಾರ್ಯಕ್ರಮ

## ಸ್ವಯಂ ಸೇವಾ ಸಂಸ್ಥೆಗಳ ವಿವರ

| ಕ್ರ.ಸಂ | ಸ್ವಯಂ ಸೇವಾ ಸಂಸ್ಥೆಯ ಹೆಸರು | ವಹಿಸಿರುವ ಶಾಲೆಗಳ ಸಂಖ್ಯೆ | | | | ಮಕ್ಕಳ ಹಾಜರಾತಿ | | | | ಫಲಾನುಭವಿಗಳ ಸಂಖ್ಯೆ | | | | ಬಿಸಿ ಊಟ ಪಡೆಯದೆ ಇರುವ ಮಕ್ಕಳ ಸಂಖ್ಯೆ | | | |
|---|---|---|---|---|---|---|---|---|---|---|---|---|---|---|---|---|---|
| | | ಸರ್ಕಾರಿ | | ಅನುದಾನತ | | ಸರ್ಕಾರಿ | | ಅನುದಾನತ | | ಸರ್ಕಾರಿ | | ಅನುದಾನತ | | ಸರ್ಕಾರಿ | | ಅನುದಾನತ | |
| | | ಪ್ರಾಥಮಿಕ | ಪ್ರೌಢ | ಪ್ರಾಥಮಿಕ | ಪ್ರೌಢ | ಪ್ರಾಥಮಿಕ | ಪ್ರೌಢ | ಪ್ರಾಥಮಿಕ | ಪ್ರೌಢ | ಪ್ರಾಥಮಿಕ | ಪ್ರೌಢ | ಪ್ರಾಥಮಿಕ | ಪ್ರೌಢ | ಪ್ರಾಥಮಿಕ | ಪ್ರೌಢ | ಪ್ರಾಥಮಿಕ | ಪ್ರೌಢ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
| - | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್,ಶಿವಮೊಗ್ಗ

ಅಕ್ಷರ ದಾಸೋಹ ಕಾರ್ಯಕ್ರಮ

## Details of Purcahase of Fire Extinguisher

**District Name:-SHIMOGA**

| Sl.No | Name of the Taluk | No of Schools | No of Fire Extinguishers Instaled |
|---|---|---|---|
| 1 | Shimoga | 346 | 342 |
| 2 | Bhadravati | 295 | 273 |
| 3 | Sagar | 341 | 334 |
| 4 | Shikaripur | 255 | 244 |
| 5 | Sorab | 327 | 323 |
| 6 | Hosanagara | 252 | 250 |
| 7 | Thlrthahalli | 267 | 258 |
| | Total | 2083 | 2024 |

## ಜಿಲ್ಲಾ ಪಂಚಾಯತ್,ಶಿವಮೊಗ್ಗ

ಅಕ್ಷರ ದಾಸೋಹ ಕಾರ್ಯಕ್ರಮ

ಪ್ರಸಕ್ತ ಸಾಲಿನಲ್ಲಿ ಬಿಯೂಟ ಸೇವಿಸಿ ಅಸ್ವಸ್ಥರಾದ ಮಕ್ಕಳ ಶಾಲವಾರು ವಿವರ

**ಪ್ರಾಥಮಿಕ**

| ಕ್ರ.ಸಂ | ಬಿಸಿಯೂಟ ಸೇವಿಸಿ ಅಸ್ವಸ್ಥರಾದ ಶಾಲೆಯ ಹೆಸರು | ಮಕ್ಕಳ ಸಂಖ್ಯೆ | ಮಕ್ಕಳ ಆರೋಗ್ಯದ ಸ್ಥಿತಿ | ತೆಗೆದುಕೊಂಡ ಕ್ರಮ |
|---|---|---|---|---|
| 1 | 2 | 3 | 4 | 5 |
| – | ಯಾವುದು ಇಲ್ಲ | – | – | – |

**ಪ್ರೌಢ**

| ಕ್ರ.ಸಂ | ಬಿಸಿಯೂಟ ಸೇವಿಸಿ ಅಸ್ವಸ್ಥರಾದ ಶಾಲೆಯ ಹೆಸರು | ಮಕ್ಕಳ ಸಂಖ್ಯೆ | ಮಕ್ಕಳ ಆರೋಗ್ಯದ ಸ್ಥಿತಿ | ತೆಗೆದುಕೊಂಡ ಕ್ರಮ |
|---|---|---|---|---|
| 1 | 2 | 3 | 4 | 5 |
| – | ಯಾವುದು ಇಲ್ಲ | – | – | – |

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್,ಶಿವಮೊಗ್ಗ

ಅಕ್ಷರ ದಾಸೋಹ ಕಾರ್ಯಕ್ರಮ

ಗೋಡೆ ಬರಹ/ಶಾಲಾ ಕೈತೋಟ ಮಾಹಿತಿ 31.03.2011 ರಲ್ಲಿದ್ದಂತೆ

| ಕ್ರ.ಸಂ | ಜಿಲ್ಲೆಯ ಹೆಸರು | ಗೋಡೆ ಬರಹ ಬರೆಸಲು ಮಂಜೂರಾತಿ ನೀಡಿರುವ ಶಾಲೆಗಳ ಸಂಖ್ಯೆ ಪ್ರತಿ ಶಾಲೆಗೆ ರೂ.500/- ರಂತೆ | ಗೋಡೆ ಬರಹ ಬರೆಸಿರುವ ಶಾಲೆಗಳ ಸಂಖ್ಯೆ | ಬಾಕಿ | ಶಾಲಾ ಕೈತೋಟ ನಿರ್ಮಾಣಕ್ಕೆ ಮಂಜೂರಾತಿ ನೀಡಿರುವ ಶಾಲೆಗಳ ಸಂಖ್ಯೆ ಪ್ರತಿ ಶಾಲೆಗೆ ರೂ 3500/- ರಂತೆ | ಕೈತೋಟ ಬೆಳೆಸಿರುವ ಶಾಲೆಗಳ ಸಂಖ್ಯೆ | ಬಾಕಿ |
|---|---|---|---|---|---|---|---|
| 1 | ಶಿವಮೊಗ್ಗ | 1869 | 1869 | ಇಲ್ಲ | 864 | 864 | ಇಲ್ಲ |
| | ಒಟ್ಟು | 1869 | 1869 | - | 864 | 864 | - |

ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ್,ಶಿವಮೊಗ್ಗ

## ಅಕ್ಷರ ದಾಸೋಹ ಕಾರ್ಯಕ್ರಮ

### ಅಕ್ಟೋಬರ್-2010 ರಿಂದ ಡಿಸೆಂಬರ್-2010ರವರೆಗೆ ಬಿ.ಪಿ.ಎಲ್.ಅಕ್ಕಿ ಮತ್ತು ಎ.ಪಿ.ಎಲ್.ಅಕ್ಕಿಎತ್ತುವಳಿ ಮಾಹಿತಿ

ಜಿಲ್ಲೆಯ ಹೆಸರು: ಶಿವಮೊಗ್ಗ

ತರಗತಿ 1-5

| ತಿಂಗಳು | ಪ್ರಾರಂಭಿಕ ಶಿಲ್ಕು 01.04.2010 ರಲ್ಲಿದ್ದಂತೆ | ಎತ್ತುವಳಿ ಪ್ರಮಾಣ | ಶಾಲೆಗಳಿಗೆ ಸರಬರಾಜು ಮಾಡಿದ ಪ್ರಮಾಣ | ಉಪಯೋಗಿಸಿದ ಪ್ರಮಾಣ | ಉಳಿಕೆ |
|---|---|---|---|---|---|
| ಅಕ್ಟೋಬರ್-2010 | 55.700 | 179.666 | - | 67.230 | 167.326 |
| ನವಂಬರ್-2010 | | 179.667 | 199.420 | 179.690 | 170.303 |
| ಡಿಸೆಂಬರ್-2010 | | 179.668 | 199.430 | 177.840 | 172.131 |

ತರಗತಿ 6-8

| ತಿಂಗಳು | ಪ್ರಾರಂಭಿಕ ಶಿಲ್ಕು 01.04.2010 ರಲ್ಲಿದ್ದಂತೆ | ಎತ್ತುವಳಿ ಪ್ರಮಾಣ | ಶಾಲೆಗಳಿಗೆ ಸರಬರಾಜು ಮಾಡಿದ ಪ್ರಮಾಣ | ಉಪಯೋಗಿಸಿದ ಪ್ರಮಾಣ | ಉಳಿಕೆ |
|---|---|---|---|---|---|
| ಅಕ್ಟೋಬರ್-2010 | 75.410 | 180.000 | - | 69.560 | 182.810 |
| ನವಂಬರ್-2010 | | 180.000 | 208.702 | 182.730 | 180.080 |
| ಡಿಸೆಂಬರ್-2010 | | 180.000 | 210.712 | 183.130 | 176.950 |

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್,ಶಿವಮೊಗ್ಗ

ಅಕ್ಷರ ದಾಸೋಹ ಕಾರ್ಯಕ್ರಮ

ಅಡುಗೆ ಅನಿಲ ಮಾಸಿಕ ಸರಬರಾಜು ಮಾಹಿತಿ

| ಕ್ರಸಂ | ಜಿಲ್ಲೆ | ಅನಿಲ ಬೇಡಿಕೆ | | | ಒಟ್ಟು | ಸರಬರಾಜು | | | ಒಟ್ಟು | ಸರಬರಾಜು ಮಾಡದೆ ಉಳಿದ ಕೊರತೆ | | | ಒಟ್ಟು |
|---|---|---|---|---|---|---|---|---|---|---|---|---|---|
| | | HPC | BPC | IOC | | HPC | BPC | IOC | | HPC | BPC | IOC | |
| 1 | ಶಿವಮೊಗ್ಗ | 2025 | 2100 | 1661 | 5786 | 2025 | 2100 | 1661 | 5786 | – | – | – | – |

# ಅಧ್ಯಾಯ – 4

**ಅಧ್ಯಯನದ ವಿಧಾನ, ದತ್ತಾಂಶ ಸಂಗ್ರಹಣೆ / ಸಾಧನ ಮತ್ತು ತಂತ್ರಗಳು:–**

ಜಿಲ್ಲೆಯಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ ಅನುಷ್ಠಾನ ಒಂದು ಮಾನೋಗ್ರಾಫ್ / ಅಧ್ಯಯನಕ್ಕಾಗಿ ಮಾಹಿತಿ ಸಂಗ್ರಹಣೆ ಮತ್ತು ಅವಲೋಕನಕ್ಕಾಗಿ ಜಿಲ್ಲೆಯಲ್ಲಿ ಆಯ್ಕೆಗೊಂಡ (ಪ್ರತಿಚಯನಗಳ) ಮಾಹಿತಿ ಈ ಕೆಳಕಂಡಂತಿರುತ್ತದೆ.

1. ಜಿಲ್ಲಾ ಮಟ್ಟದಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ ಕಛೇರಿ ಮಾಹಿತಿ ಸಂಗ್ರಹಣೆ.
